ಹರೇ ಶ್ರೀನಿವಾಸ ಗುರೋ ರಾಘವೇಂದ್ರ

ಶ್ರೀರಾಘವೇಂದ್ರತೀರ್ಥಗುರುಕಾರುಣ್ಯ 108 ಸ್ತೋತ್ರಪದಗಳು

ಜಗದ್ಗುರು ಶ್ರೀಮನ್ಮಧ್ವಾಚಾರ್ಯರ ಮೂಲಮಹಾಸಂಸ್ಥಾನ
ಶ್ರೀರಾಘವೇಂದ್ರಸ್ವಾಮಿಗಳವರ ಮಠದ ಪೀಠಾಧೀಶರು

ಪರಮಪೂಜ್ಯ 1008 ಶ್ರೀಶ್ರೀ ಸುಬುಧೇಂದ್ರತೀರ್ಥರ
ಪರಮಾನುಗ್ರಹದಿಂದ

ಸಂಕಲನ
ಶ್ರೀಸುಳಾದಿ ಹನುಮೇಶಾಚಾರ್
ಮಂತ್ರಾಲಯ.

ಪ್ರಕಾಶನ
ಶ್ರೀಮತಿ ಪುಷ್ಪಾಗುಪ್ತ
ವೆಂಕಟಾದ್ರಿ ಭಜನಮಂಡಳಿ–ಬೆಂಗಳೂರು.

ಹರೇ ಶ್ರೀನಿವಾಸ ಗುರೋ ರಾಘವೇಂದ್ರ

ಶ್ರೀರಾಘವೇಂದ್ರತೀರ್ಥಗುರುಕಾರುಣ್ಯ 108 ಸ್ತೋತ್ರಪದಗಳು

ಪರಮಪೂಜ್ಯ ಶ್ರೀಶ್ರೀಸುಬುಧೇಂದ್ರತೀರ್ಥರ ಪರಮಾನುಗ್ರಹದಿಂದ

ಸಂಕಲನ
ಶ್ರೀ ಸುಳಾದಿ ಹನುಮೇಶಾಚಾರ್
ಮಂತ್ರಾಲಯ.

ಪ್ರಥಮ ಮುದ್ರಣ – 2017

ಬೆಲೆ–

ಪ್ರಕಾಶನ
ಶ್ರೀಮತಿ ಪುಷ್ಪಗುಪ್ತ
ವೆಂಕಟಾದ್ರಿ ಭಜನಮಂಡಳಿ–ಬೆಂಗಳೂರು.

ಮುದ್ರಣ–
ಶ್ರೀಗುರುಸಾರ್ವಭೌಮಗ್ರಾಫಿಕ್ಸ್,
ಆದೋನಿ–518301

1. ಎಂದು ಕಾಂಬೆನೊ ರಾಘವೇಂದ್ರನ

ಎಂದು ಕಾಂಬೆನೊ ರಾಘವೇಂದ್ರನ, ತಂದೆ ವರಹಜ ವಾಸನ ॥ ಪ ॥

ಬಂದ ಭಕುತರಿ ವರವನ, ನೀಡುವನ, ರಕ್ಷಿಸುವನ ॥ಆ.ಪ।

ಮಂಚಾಲೆಯ ಬೃಂದಾವನದಲಿ,ಇರುವನ ತಪಗರೆವನ।
ಪಂಚರೂಪವ ಹರಿಯನಾಮವ,ನಿತ್ಯದಲಿ ಭಜಿಸುವವನ ॥ 1 ॥

ಸರ್ವಕಾಲದಿ ನೀನೆ ಗತಿಯೆಂದು ಭಕುತರನು ಪೊರೆಯುವವನ ।
ಸಾರ್ವಭೌಮನೆ ಪರಿಮಳಾರ್ಯನೇ ಕಾಮಿತಾರ್ಥವ ಕೊಡುವನ ॥ 2 ॥

ಛಂದದಿಂದಲಿ ರಥದಲಿ, ನಿತ್ಯ ಮೆರೆವನ ವರವೀವನ ।
ನಂದ ಶ್ರೀಕರವಿಠಲನ,ಮನದಲ್ಲಿ ಧ್ಯಾನಿಸುವನ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

★★★

2. ರಾಯ ಬಾರೋ ತಂದೆ ತಾಯಿ ಬಾರೋ

ರಾಯ ಬಾರೋ ತಂದೆ ತಾಯಿ ಬಾರೋ ನಮ್ಮನ್ ಕಾಯಿ ಬಾರೋ ॥ ಪ ॥

ಮಾಯಿಗಳ ಮರ್ದಿಸಿದ ರಾಘವೇಂದ್ರಾ, ರಾಯಬಾರೋ ॥ಅ.ಪ.॥
ವಂದಿಪ ಜನರಿಗೆ ಮಂದಾರ ತರುವಂತೆ ।

ಕುಂದದಭೀಷ್ಟವ ಕೊಡುತಿಪ್ಪ, ರಾಯಬಾರೋ ।
ಕುಂದದಭೀಷ್ಟವ ಕೊಡುತಿಪ್ಪ ಸುರಮುನಿ ।
ಮಂದನಮತಿಗೆ ರಾಘವೇಂದ್ರ ರಾಯಬಾರೋ ॥ 1 ॥

ಆರು ಮೂರು ಏಳು ನಾಲ್ಕು ಎಂಟು ಗ್ರಂಥದ ಸಾರಾರ್ಥ ।
ತೋರಿದಿ ಸರ್ವರಿಗೆ ನ್ಯಾಯದಿಂದ, ರಾಯಬಾರೋ ॥
ತೋರಿದಿ ಸರ್ವರಿಗೆ ನ್ಯಾಯದಿಂದ ಸರ್ವಜ್ಞ।
ಸೂರಿಗಳರಸನೆ ರಾಘವೇಂದ್ರ ರಾಯಬಾರೋ ॥ 2 ॥

ಭೂತಳ ನಾಥನ ಭೀತಿಯ ಬಿಡಿಸಿದಿ ।
ಪ್ರೇತತ್ವ ಕಳೆದಿ ಮಹಿಷಿಯ ರಾಯಬಾರೋ ।
ಪ್ರೇತತ್ವ ಕಳೆದಿ ಮಹಿಷಿಯ ಮಹಾಮಹಿಮ ।
ಜಗನ್ನಾಥವಿಠ್ಠಲನ ಪ್ರೀತಿಪಾತ್ರ ರಾಯಬಾರೋ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

3. ರಾಯ ಬಾರೋ ರಾಘವೇಂದ್ರ ಬಾರೋ ।

ರಾಯ ಬಾರೋ ರಾಘವೇಂದ್ರ ಬಾರೋ ।
ಜೀಯ ನೀನಲ್ಲದೇ ಇನ್ನಾರು ಕಾಯ್ವರು ॥ ಪ ॥

ಸಲ್ಹಾದಣ್ಣನೆ ಬಾರೋ ಪ್ರಲ್ಹಾದರಾಯ ಬಾರೋ ।
ಬಾಲ್ಹೀಕರಾಜನಾಗಿ ಮೆರೆದಂಥ ಪ್ರಭುವೆ ಬಾರೋ ॥ 1 ॥

ತುಂಗಾವಾಸ ಮುನಿಪುಂಗವನೀವಾತ ।
ಜಂಗುಳಿ ಪಾಲಿಸಲು ಸಂಗೀತ ಪ್ರೀಯನೆ ಬಾರೋ ॥ 2 ॥

ಶ್ರೀಕರುಣಾಸಿಂಧು ಬಾರೋ ಸಾಕಬೇಕಯ್ಯ ಬಂಧೋ ।
ಶ್ರೀಕರ ಶ್ರೀದವಿಠ್ಠಲನಾ ತೋರು ಬಾರೋ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

★ ★ ★

4. ಬಾರೋ ರಾಘವೇಂದ್ರ ಬಾರೋ

ಬಾರೋ ರಾಘವೇಂದ್ರ ಬಾರೋ ಕಾರುಣ್ಯ ವಾರಿಧಿಯೇ ಬಾರೋ ।
ಆರಾಧಿಪ ಭಕ್ತರಭೀಷ್ಟ ಪೂರೈಸುವ ಪ್ರಭುವೇ ಬಾರೋ ॥ ಪ ॥

ರಾಜವಂಶೋದ್ಭವನ ಪಾದ ರಾಜೀವ ಭೃಂಗನೆ ಬಾರೋ ।
ರಾಜಾಧಿ ರಾಜರೊಳು ವಿರಾಜಿಸುವ ಚಲುವ ಬಾರೋ ॥ 1 ॥

ವ್ಯಾಸರಾಯನೆನಿಸಿ ನೃಪನ ಕ್ಲೇಶ ಕಳೆದವನೆ ಬಾರೋ ।
ಶ್ರೀ ಸುಧೀಂದ್ರ ಕರಸಂಜಾತ ವಾಸುದೇವಾರ್ಚಕನೆ ಬಾರೋ ॥ 2 ॥

ಸನ್ಯಾಸ ಕುಲದೀಪ ಬಾರೋ ಸನ್ನುತ ಮಹಿಮನೆ ಬಾರೋ ।
ಮಾನ್ಯ ಜಗನ್ನಾಥವಿಠ್ಠಲ ಪ್ರಸನ್ನಜನರ ಪ್ರೀಯ ಬಾರೋ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

★ ★ ★

5. ಬಾರೋ ಗುರು ರಾಘವೇಂದ್ರ ಬಾರಯ್ಯ ಬಾ ಬಾ

ಬಾರೋ ಗುರು ರಾಘವೇಂದ್ರ ಬಾರಯ್ಯ ಬಾ ಬಾ
ಬಾರೋ ಗುರು ರಾಘವೇಂದ್ರ ಬಾರಯ್ಯ ಬಾ ಬಾ ॥ ಪ ॥

ಹಿಂದುಮುಂದಿಲ್ಲೆನಗೆ ನೀ ಗತಿ ಎಂದು ನಂಬಿದೆ ನಿನ್ನ ಪಾದವ ।
ಬಂಧನವ ಬಿಡಿಸೆನ್ನ ಕರಪಿಡಿ ನಂದಕಂದ ಮುಕುಂದ ಬಂಧೋ ॥ಅ.ಪ.॥

ಸೇವಕನೆಲೊ ನಾನು ।
ಧಾವಿಸಿ ಬಂದೆನು ಸೇವೆಯ ನೀಡೋ ನೀನು ।
ಸೇವಕನ ಸೇವೆಯನು ಸೇವಿಸಿ ।
ಸೇವ್ಯಸೇವಕ ಭಾವವೀಯುತ ।
ತಾವುಗಾಣಿಸಿ ಪೊರೆಯೊ ಧರೆಯೊಳು
ಪಾವನಾತ್ಮಕ ಕಾಯ್ವ ಕರುಣಿ ॥ 1 ॥

ಕರೆದರೆ ಬರುವಿ ಎಂದು ।
ಸಾರುವುದು ಡಂಗುರ ।
ತ್ವರಿತದಿ ಒದಗೋ ಬಂದು ।
ಜರಿಯಬೇಡವೊ ಬರಿದೆ ನಿನ್ನಯ ।
ವಿರಹ ತಾಳದೆ ಮನದಿ ಕೊರಗುವೆ ।
ಹರಿಯ ಸ್ಮರಣೆಯ ನಿರುತದಲಿ
ಎನಗ್ಹರುಷದಲಿ ನೀ ನಿರುತ ಕೊಡುತಲಿ ॥ 2 ॥

ನರಹರಿ ಪ್ರೀಯನೆ ಬಾ । ಗುರು ಶ್ರೀಶ ವಿಠಲನ
ಕರುಣ ಪಾತ್ರನೆ ಬೇಗ ಬಾ ।
ಗುರುವರನೆ ಪರಿಪೋಷಿಸೆನ್ನನು ।
ಮರೆಯದಲೆ ತವ ಚರಣ ಕೋಟಿಯಲಿರಿಸಿ
ಚರಣಾಂಬುಜವ ತೋರುತ ತ್ವರಿತದಲಿ ಓಡೋಡಿ ಬಾ ಬಾ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

6. ಬಾರೋ ನಮ್ಮ ಮನೆಗೆ ಶ್ರೀರಾಘವೇಂದ್ರಾ

ಬಾರೋ ನಮ್ಮ ಮನೆಗೆ ಶ್ರೀರಾಘವೇಂದ್ರಾ ॥ ಪ ॥

ಬಾರೋ ದುಃಖಾಪಹಾರ ಬಾರೋ ದುರಿತ ದೂರ ।
ಬಾರಯ್ಯ ಸನ್ಮಾರ್ಗ ದಾರಿ ತೋರುವ ಗುರುವೇ ॥ ಅ.ಪ ॥

ಬಾಲ ಪ್ರಲ್ಹಾದನಾಗಿ ಖೂಳ ಕಶ್ಯುಪುವಿಗೆ ।
ಲೋಲ ಶ್ರೀನರಹರಿ ಕಾಲರೂಪವ ತೋರ್ದ ॥ 1 ॥

ವ್ಯಾಸ ನಿರ್ಮಿತ ಗ್ರಂಥ ಮಧ್ವಕೃತ ಭಾಷ್ಯವ ।
ಬೇಸರದೆ ಓದಿ ಮೆರೆವ ವ್ಯಾಸ ಮುನಿಯೇ ॥ 2 ॥

ಭಕ್ತ ವತ್ಸಲನೆಂಬ ಬಿರುದು ಬೇಕಾದರೆ ।
ಭಕ್ತರ ಮೊರೆ ಕೇಳೋ ಮಧ್ವೇಶವಿಠಲ ದಾಸ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

7. ಕೋರಿ ಕರೆವೆ ಗುರು ಶ್ರೀರಾಘವೇಂದ್ರನೆ

ಕೋರಿ ಕರೆವೆ ಗುರು ಶ್ರೀರಾಘವೇಂದ್ರನೆ ।
ಬಾರೋ ಮಹಾ ಪ್ರಭುವೇ ।
ಚಾರು ಚರಣಯುಗ್ಮಸಾರಿ ನಮಿಪೆ ಬೇಗ ।
ಬಾರೋ ಹೃದಯ ಸುಖಸಾರ ರೂಪವ ತೋರೋ ॥ ಪ ॥

ಎಲ್ಲಿ ನೋಡಲು ಹರಿ ಅಲ್ಲೇ ಕಾಣುವನೆಂದು ಕ್ಷುಲ್ಲ ಕಂಬವನೊಡೆದು ।
ನಿಲ್ಲದೆ ನರಹರಿ ಚೆಲ್ವಿಕೆ ತೋರಿದ ।
ಫುಲ್ಲಲೋಚನ ಶಿಶು ಪ್ರಲ್ಹಾದನಾಗಿ ಬಾರೋ ॥ 1 ॥

ಈ ಸಮಯದಿ ನನ್ನಾಸೆ ನಿನ್ನೊಳು ।
ಬಲು ಸೂಸಿ ಹರಿಯುತಿಹುದೋ ।
ಕೂಸಿಗೆ ಜನನಿ ನಿರಾಶೆಗೊಳಿಸದಲೇ ।
ತೋಷ ತಳೆದು ವಿಠಲೇಶ ಹೃದಯದಿ ಬಾರೋ ॥ 2 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

8. ಬಾರೊ ಬಾರೊ ಗುರುರಾಯ

ಬಾರೊ ಬಾರೊ ಗುರುರಾಯ ॥ ಪ ॥

ತೊರೊ ತೊರೊ ನಿನ್ನ ಚರಣವ ॥ ಅ.ಪ ॥

ಸಾಧುಗಳ ಆಧಿವ್ಯಾಧಿಗಳನು ಪರಿಹರಿಸುವನೆ ।
ವೇದವೇದ್ಯಅಮಲ ಚರಿತ್ರವ ತಿಳಿದವನೆ ।
ವಾದ ಮಾಡುವ ದುರುಳರ ಮತವೆಲ್ಲ ಹರಿದವನೆ ।
ಸಾಧು ಭೂಸುರಿಗೆಲ್ಲ ಹರಿಪರ ಪೇಳಿದವನೆ ॥ 1 ॥

ಅತಿಶಯದಿ ಇಷ್ಟಾರ್ಥವನು ಕೊಡುವ ಮಹಾಮಹಿಮನೇ ।
ರತುನದಾಸರಿಗೆ ಒಲಿದು ಮನದಿ ಹರುಷವಿತ್ತವನೇ

ಚಾರುತರ ವಿಮಲಕೀರ್ತಿ ಎಷ್ಟು ಪೇಳಲಿ ಇವರ ಮಹಿಮೆ ।
ವಾರವಾರದಲಿಭಜನೆ ಮಾಡುವರ ಪೊರೆವ ದೊರೆಯೆ ॥ 2 ॥

ಹರಿಯೆ ನಿನ್ನ ವಶನಾಗಿ ಇರುವ ಕಾರಣದಿಂದ ।
ಶಿರಿವರದವಿಠಲತಂದು ತೋರಿಸಯ್ಯ ಕರುಣಾಸಿಂಧು ।
ಪರಿಪರಿ ಸುಖವಿತ್ತು ವರವಿತ್ತು ಪೊರೆಯೆ ನೀನು ।
ತರಿದು ದುರಿತರಾಶಿಯೆಲ್ಲ ರಕ್ಷಿಸಲು ಬೇಗ ಬಾರೊ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

9. ಮನಕೆ ಬಾರೆಲೊ ಗುರುವೇ ಶ್ರೀ ರಾಘವೇಂದ್ರ.

ಮನಕೆ ಬಾರೆಲೊ ಗುರುವೇ ಶ್ರೀ ರಾಘವೇಂದ್ರ.
ಶಿಶುತನದಲಿ ಬಹುಪುಂಡವನಾಡುತ ಸತಿಸುತದೊಳು
ಅತಿ ಮೋಹದಿಂದ । ಅಸಮದಯಾಳು ಶ್ರೀಗುರುರಾಘವೇಂದ್ರನೆ,
ಕುಸುಮನಾಭನಪ್ರಿಯ ಪರಿಮಾಳರ್ಯನೇ ಎನ್ನ ॥ 1 ॥

ಕರುಣವ ಮಾಡೆಲೊ ನಿನ್ನ ಸರಿಗಾಣೆನೊ
ಬರುವ ಭಕುತರಿಗೆ ಮುದವೀವ ॥
ವರವೀವ ವರವೀವ ಕೇಳಿದಾಕ್ಷಣದಲ್ಲಿ
ವರಹಜತಟವಾಸ ಹೃದಯಮಂದಿರಕೆ ನೀ. ॥ 2 ॥

ಜನುಮ ಜನುಮದೋಷದಿಂದ ಬಂದೆನೊ
ನಾನು ಜನುಮಕಾರಣನೀನು ನಿನ್ನವನೊ ನಾನು ।
ನಿನ್ನ ದರುಶನದಿ ಮಂದಮತಿಯು ತೊಲಗಿ
ಇಂದು ಧನ್ಯನಾದೆ ಶ್ರೀಕರದಾಸನೇ ॥ 3

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

10. ಬಾರೊ ಮನ್ಮನಕ್ಕೆ ಮಂದಿರ ಶ್ರೀರಾಘವೇಂದ್ರ

ಬಾರೊ ಮನ್ಮನಕ್ಕೆ ಮಂದಿರ ಶ್ರೀರಾಘವೇಂದ್ರ।
ಶರಣಾಗತ ನಾನು ಭಕ್ತವತ್ಸಲ ನೀನು।
ಸುರತರುವಂದದಿ ಕಾಮಧೇನುನೀ ॥ 1 ॥

ಭಾಸುರಚರಿತನೆ ದಾಸನಮೊರೆ ಕೇಳಿ।
ದೋಷಗಳೆಣಿಸದೆ ಪೋಷಿಸಲೆನ್ನನು ॥ 2 ॥

ಮನಸಿಜಪಿತ ಕಮಲೇಶಪದಾರ್ಚಕ।
ಅನಂತ ಮಹಿಮ ನಿನ್ನ ಸೇವಕ ನಾನೆಂದು ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

11. ಬಾರೈ ಬಾರೈ ಗುರುರಾಘವೇಂದ್ರನೇ ಬಾರೋ ಮಹಪ್ರಭುವೇ

ಬಾರೈ ಬಾರೈ ಗುರುರಾಘವೇಂದ್ರನೇ ಬಾರೋ
ಮಹ ಪ್ರಭುವೇ ॥ ದೇವ ॥ ಅ.ಪ.॥

ಪ್ರಹ್ಲಾದರಾಜ ಬಾರೊ ವ್ಯಾಸರಾಜನೇ ಬಾರೊ ।
ಬಾಹ್ಲಿಕರಾಜಬಾರೊ ರಾಘವೇಂದ್ರನೇ ಬಾರೊ ॥ 1 ॥

ಪರಿಮಾಳರ್ಯನೇ ಬಾರೊ, ಸುರರ ತರುವೇ ಬಾರೊ।
ಪರಲೋಕಸಾಧನ ಮಾರ್ಗವ ತೋರೊ ಬಾರೊ ॥ 2 ॥

ಮಂತ್ರಾಲಯವಾಸ ಬಾರೊ, ಸಂತತ ಸಲಹುವ ಬಾರೊ।
ಅಂತರಂಗದಿ ನಿಂತ ಶ್ರೀಕರವಿಠಲದೂತ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

12. ಸಾಗಿಬಾರೋ ಗುರುರಾಘವೇಂದ್ರರಾಯಾ

ಸಾಗಿಬಾರೋ ಗುರುರಾಘವೇಂದ್ರರಾಯಾ । ವರಸತ್ಕವಿಗೇಯ ॥ ಪ ॥

ಕೂಗುತ ಕರೆಯುವ ಭಾಗವತರ ಮೊರೆಯ ।
ಲಾಲಿಸು ಮುನಿವರ್ಯ ॥ ಅ.ಪ.॥

ಪಾವನಘನ ವೃಂದಾವನ ಮಂದಿರನೆ । ಸದ್ಗುಣ ಬಂಧುರನೆ ।
ಪಾವಮಾನಿ ಮತ ಶರಧಿಗೆ ಚಂದಿರನೆ । ದರಸಮಕಂಧರನೆ ।
ಭಾವಣಿಪುರ ಸುಜನಾವಳಿ ಕೋರಿಕೆಯ । ಗರೆಯಲು ಶುಭಕಾಯ॥ 1 ॥
ಶರಣಜನರು ಮೈಮರೆದು ಕರೆಯಲಾಗಿ । ನಿಲ್ಲದೆ ವರಯೋಗಿ ।
ಭರದಿ ಬಂದು ಕರಪಿಡಿಯುವ ದೊರೆ ನೀನು ।
ಎಂದರಿತೆವು ಸುರಧೇನು । ಕರುಣಾಕರ ಗತಿದಾಯಕ ನೀನೆಂದು ।
ಭಜಿಪೆವು ದಯಾಸಿಂಧು ॥ 2 ॥

ಶ್ಯಾಮಸುಂದರರನ ಪ್ರೇಮವ ಪಡೆದಾತ । ಜಗದೊಳಗೆ ಪ್ರಖ್ಯಾತ ।
ನೇಮದಿ ಭಜಿಪರ ಕಾಮಿತ ಕೊಡುವಾತ ।
ದೈಶಿಕ ಕುಲನಾಥ । ಹೇಮಶಯ್ಯ ಸುಕುಮಾರ
ಮಮತೆಯಿಂದ । ಮಂತ್ರಾಲಯದಿಂದ ॥ 3 ।

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

13. ಜನಮನದಲಿ ಸದ್ಭಾವನೆ ಬಿತ್ತಲು ಇನ್ನೊಮ್ಮೆ ಬಾ ಗುರುರಾಯಾ

ಜನಮನದಲಿ ಸದ್ಭಾವನೆ ಬಿತ್ತಲು ಇನ್ನೊಮ್ಮೆ ಬಾ ಗುರುರಾಯಾ।

ಪಾಪವೀಲೋಕದಿ ತುಂಬಿ ನಿಂತಿದೆ
ಪಾಪಹರಣ ನೀ ಬೇಗನೆ ಬಾರೋ ॥ ಪ ॥

ತನುಮನ ಧನವನು ನಿನಗರ್ಪಿಸಿದೆ ಇನಿತು
ಪೇಳುತಲಿ ನಾ ಪಾಪದಿ ನೊಂದೆ ।
ದೀನರ ರಕ್ಷಿಸು ಎಂದು ನಾ ಬೇಡಿದೆ ।
ಗುರುರಾಜಾ ನಿನ್ನ ಕಾಡಿ ನಾ ಬೇಡಿದೆ ॥ 1 ॥

ಗಂಗಾ ನದಿಯ ಚೆಲ್ವಿಕೆ ಪಡೆದ ।
ತುಂಗೆಯ ದಡದಲಿ ವಾಸ ಮಾಡಿದ ।
ಅಘದ ಜನುಮಗಳ ಪಾಪವ ತೊಳೆಯಲು
ರಾಘವೇಂದ್ರಗುರು ಇನ್ನೊಮ್ಮೆ ನೀ ಬಾರೋ ॥ 2 ॥

ಮಂತ್ರಾಲಯದ ಚೆಲುವ ಚಂದಿರ ।
ಅಂತರಂಗದಲಿ ನೆಲೆಸಿ ನಿರಂತರ ।
ಕಂತು ಪಿತನೆ ಶ್ರೀ ಪ್ರಾಣೇಶ ವಿಠ್ಠಲನೆ ।
ಸಂತಸದೀ ನೀ ಭಕುತರ ಪೊರೆಯಲು ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

14. ಎದ್ದು ಬರುತಾರೆ ನೋಡೆ ತಾವು

ಎದ್ದು ಬರುತಾರೆ ನೋಡೆ । ತಾವು । ಎದ್ದು ಬರುತಾರೆ ನೋಡೆ

ಮುದ್ದುವೃಂದಾವನ ಮಧ್ಯದೊಳಗಿಂದ ।
ತಿದ್ದಿ ಹಚ್ಚಿದ ನಾಮಮುದ್ರೆಗಳೊಪ್ಪುತಲಿ ॥ ಪ ॥

ಗಳದೊಳು ಶ್ರೀತುಳಸಿ ನಳಿನಾಕ್ಷಮಾಲೆಗಳು
ಚೆಲುವ ಮುಖದೊಳು ಹೊಳೆವ ದಂತಗಳಿಂದ ॥ 1 ॥

ಹೃದಯ ಸದನದಲ್ಲಿ ಪದುಮನಾಭನ ಭಜಿಸಿ ।
ಮುದಮನದಿಂದ ನಿತ್ಯಸದಮಲರೂಪತಾಳಿ ॥ 2 ॥

ದಾತ ಗುರು ಜಗನ್ನಾಥವಿಠಲನ ।
ಪ್ರೀತಿಯ ಪಡಿಸುತ ದೂತರ ಪೊರೆಯುತ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

15. ಕರೆದರೆ ಬರಬಾರದೆ । ರಾಘವೇಂದ್ರಾ

ಕರೆದರೆ ಬರಬಾರದೆ । ರಾಘವೇಂದ್ರಾ ॥ ಪ ॥
ವರ ಮಂತ್ರಾಲಯ ಪುರ ಮಂದಿರ ತವ ।
ಚರಣ ಸೇವಕರು ಕರವ ಮುಗಿದು ॥ 1 ॥

ಹರಿದಾಸರು ಸುಸ್ವರ ಸಮ್ಮೇಳದಿ ।
ಪರವಶದಲಿ ಬಾಯಿ ತೆರೆದು ಕೂಗಿ ॥ 2 ॥

ಪೂಶರ ಪಿತ ಕಮಲೇಶ ವಿಠಲನ ।
ದಾಸಾಗ್ರೇಸರ ಈ ಸಮಯದಿ ॥ 3॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

16. ಬಂದಾನೊ ರಾಘವೇಂದ್ರಾ ಇಂದಿಲ್ಲಿಗೆ

ಬಂದಾನೊ ರಾಘವೇಂದ್ರಾ ಇಂದಿಲ್ಲಿಗೆ ॥ ಪ ॥

ಕಂದನ ಮೊರೆ ಕೇಳಿ ಜನನಿಯು ಬರುವಂತೆ ॥ ಅ.ಪ.॥

ಗಜವೇರಿ ಬಂದ ಜಗದಿ ತಾ ನಿಂದ ।
ಅಜಪಿತ ರಾಮನ ಪಾದಾಬ್ಜ ಸ್ಮರಿಸುತಲಿ ॥ 1 ॥

ಹರಿಯ ಕುಣಿಸುತ ಬಂದ ನರಹರಿ ಪ್ರಿಯ ಬಂದ ।
ಶರಣಾಗತರನು ಕರವ ಪಿಡಿವೆನೆಂದು ॥ 2 ॥

ಪ್ರಲ್ಹಾದ ವ್ಯಾಸ ಮುನೀಂದ್ರ ರಾಘವೇಂದ್ರ ।
ನಿಲಿಸುತ ಮನವ ಮಧ್ವೇಶ ವಿಠ್ಠಲನಲ್ಲಿ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

17. ಬಾರೋನಮ್ಮ ಮನೆಗೆ

ಬಾರೋ ನಮ್ಮ ಮನೆಗೆ । ಗುರುರಾಘವೇಂದ್ರ,
ಬಾರೋ ನಮ್ಮ ಮನೆಗೆ। ॥ಪ॥

ಬೆಳ್ಳಿಯ ರಥದಲ್ಲಿ ಉಲ್ಲಾಸದಿಂದಲಿ ಕುಳಿತು ।
ನಿಲ್ಲದೆ ಬರುವ । ಶ್ರೀ ಪ್ರಹ್ಲಾದರಾಯನೆ ॥ 1 ॥

ಚಂದ್ರಬಿಂಬದಂತೆ ಹೊಳೆವ ರಥದಿ ಮೆರೆವ ।
ಚಂದ್ರಕೆ ರಚಿಸಿದ ಸುಂದರವ್ಯಾಸನೆ ॥ 2 ॥

ಶೇಷಗಿರಿಯಲ್ಲಿ ವಾಸವಾದ ವೆಂಕಟನ ।
ದಾಸರಸಲಹುವ ದೇಶಿಕವರ್ಯನೆ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

18. ರಾಯ ಬಂದನೆ ರಾಘವೇಂದ್ರನೆ

ರಾಯ ಬಂದನೆ ರಾಘವೇಂದ್ರನೆ ॥ ಪ ॥

ರಾಯಬಂದು ಕಾಯೋ ಎನ್ನ ಕಾಯದಲ್ಲಿ ರೋಗ ಕಳೆದು।
ಮಾಯಪಾಶದಿಂದ ಎನ್ನ ಕಾಯಯ್ಯ ದೀನಬಂಧು ॥ಅ.ಪ॥

ರಾಜರಾಜನೆ, ಪ್ರಹ್ಲಾದರಾಜನೆ॥
ರಾಜರಾಜ ಗುರುರಾಜ ತೇಜಮಯೋರೂಪತೋರಿ ॥ 1 ॥

ವ್ಯಾಸರಾಯನೆ ಚಂದ್ರಿಕಾಚಾರ್ಯನೇ
ವಸುಧೆಯೊಳಗೆ ನಿಮ್ಮ ಸರಿ ಎಂದು ಮೆರೆದು ಬರುವ ಯತಿಯ ॥ 2 ॥

ರಾಘವೇಂದ್ರನೇ ಗುರುಸಾರ್ವಭೌಮನೇ।
ಬೇಗ ಶ್ರೀಶಶ್ರೀಕರವಿಠಲ ದಾಸನೀನು ಪೊರೆಯಲೆಂದು. ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

19. ಬಂದ ಚಂದ್ರ ಚಂದದಿಂದ ಬಂದ ನೋಡ್ಯೆ

ಬಂದ ಚಂದ್ರ ಚಂದದಿಂದ ಬಂದ ನೋಡ್ಯೆ ।
ದೇವ ವೃಂದಾವನದಿಂದ ಮೆರೆದು ಬಂದ ನೋಡ್ಯೆ ॥ ಪ ॥

ರಾಘವೇಂದ್ರನೆಂಬೋ ಚಂದ್ರ ಬಂದನೋಡ್ಯೆ
ರಾಘವೇಂದ್ರನಂಘ್ರಿ ಧ್ಯಾನದಿಂದ ನೋಡ್ಯೆ ॥ 1 ॥

(ದೇವ ವೃಂದಾವನದಿಂದ ಮೆರೆದು ಬಂದ ನೋಡ್ಡೆ)

ಯೋಗಕೀರ್ತಿ ಕಾಂತಿಯಿಂದ ಬಂದ ನೋಡ್ಡೆ ।
ತ್ಯಾಗರಾಜ ರಥವನೇರಿ ನಿಂದ ನೋಡ್ಡೆ ॥ 2 ॥

ಅವಿದು ಕಂದನೆಂದು ಕರುಣದಿಂದ ನೋಡ್ಡೆ
ಜವದಿ ವಿಠಲೇಶನೊಲುಮೆ ತಂದೆ ನೀಡ್ಡೆ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

20. ಕಂಡೆನಾ ಯತಿರಾಜನಾ

ಕಂಡೆನಾ ಯತಿರಾಜನಾ
ಪುಂಡರೀಕಾಕ್ಷನ ಪಾದ ಭಜಕನಾ ॥ಪ॥

ದಂಡ ಕಮಂಡಲ ಧರಿಸಿಹನಾ ಉ–
ದ್ಧಂಡರ ವಾದದಿ ಗೆಲಿದಿಹನಾ।
ತಂಡತಂಡದಿ ಬರುವ ಭಕುತರನಾ
ಹಿಂಡು ಪಾಪವ ತರಿದು ಪೊರೆವನಾ ॥ 1 ॥

ಕಾಷಾಯ ವಸನ ವಿಭೂಷಣ ವಿ–
ಶೇಷ ಮಹಿಮೆಯಿಂದ ಮೆರೆಯುವನಾ।
ವಾಸುಕಿ ಶಯನನ ನಿಜದಾಸನನಾ
ಭೂಷಿತ ಮಂತ್ರನಿಲಯನಾಥನಾ ॥ 2 ॥

ಕರಿವರದನ ದಿವ್ಯ ದಯವ ಪಡೆದನಾ
ವರತುಂಗತೀರಿ ರಾಜಿಪನಾ।
ಗುರು ಶ್ಯಾಮಸುಂದರನ ನಿಜವರ ಭಕ್ತನಾ
ಗುರುಸಾರ್ವಭೌಮನ ಪರಿಮಳಾರ್ಯನಾ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

21. ಕಂಡೆ ನಾ ಕನಸಿನಲಿ ಗುರುರಾಯನ

ಕಂಡೆ ನಾ ಕನಸಿನಲಿ ಗುರುರಾಯನ ॥ ಪ ॥

ಮಂಡೆಬಾಗಿ ನಮಿಸಿದೆ ಯತಿವರ್ಯನ । ಅ.ಪ ॥

ಮಂಡಲಾದೊಳು ಬಲು ಹಿಂಡು ಪಾಪಗಳೆಲ್ಲ ।
ತುಂಡು ಮಾಡಿಸಲಹುವ ಗುರುರಾಯನ ॥ 1 ॥

ಮಂದನಾದರೂ ನಾನು ದೈನ್ಯದಿಂದಲಿ ಬಂದು ।
ವೃಂದದುಖ:ಗಳೆಲ್ಲ ಬಿಡಿಸಿ ಕಾಯುವ ಸಡಾಮಿ ॥ 2 ॥

ಪೊರಿಯೊ ಗುರುವೇ ಎನಲು ಕರುಣದಿಂದಲಿ ಬಂದು ।
ಶಿರಿವರದವಿಠಲನ ದಾಸರದಾಸನು ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

22. ಕೂಸಿನ ಕಂಡೀರಾ ಸುಪ್ರಲ್ಹಾದನ ಕಂಡೀರಾ

ಕೂಸಿನ ಕಂಡೀರಾ ಸುಪ್ರಲ್ಹಾದನ ಕಂಡೀರಾ ॥ ಪ ॥

ರಾಕ್ಷಸಕುಲದಲಿ ಜನಿಸಿತು ಕೂಸು ।
ರಾಧಾಕೃಷ್ಣನ ಭಜಿಸಿತು ಕೂಸು ।
ರಾಗದ್ವೇಷಗಳ ಬಿಟ್ಟಿಹ ಕೂಸು ।
ರಾಮನ ಪಾದವ ನೆನೆಯುವ ಕೂಸು ॥ 1 ॥

ಘನ ಹರಿ ಕಂಬದಿ ತೋರಿತು ಕೂಸು ।
ಗಳಿಸಿತು ಕೃಷ್ಣನ ಪ್ರೇಮವ ಕೂಸು ।
ಗಾಳಿಸುತನೆಂಬೋ ಖ್ಯಾತಿಯ ಕೂಸು ।
ಮಂತ್ರಾಲಯದಲಿ ವಾಸಿಪ ಕೂಸು ॥ 2 ॥

ಪ್ರಸಿದ್ಧ ವ್ಯಾಸರಾಯನೆಂಬುವ ಕೂಸು ।
ಪ್ರವೀಣ ಪದ್ಯದೊಳೆನಿಸುವ ಕೂಸು ।
ಪ್ರಲ್ಹಾದನೆಂಬೋ ಆಲ್ಹಾದದ ಕೂಸು ।
ಪ್ರಸನ್ನ ಮಧ್ವೇಶವಿಠಲನ ಕೂಸು ॥ 35 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

23. ರಥವನೇರಿದ ರಾಘವೆಂದ್ರ ರಾಯ ಗುಣಸಾಂದ್ರ

ರಥವನೇರಿದ ರಾಘವೆಂದ್ರ ರಾಯ ಗುಣಸಾಂದ್ರ ॥ ಪ ॥

ಸತತ ಮಾರ್ಗದಿ ಸಂತತ ಸೇವಿಪರಿಗೆ
ಅತಿಹಿತದಲಿ ಮನೋರಥವ ಕೊಡುವೆನೆಂದು ॥ ಅ.ಪ.॥

ಚತುರ ದಿಕ್ಕು ವಿದಿಕ್ಕುಗಳಲ್ಲಿ ಚರಿಪ ಜನರಲ್ಲಿ ।
ಮಿತಿಯಿಲ್ಲದೆ ಬಂದೋಲೈಸುತಲಿ ವರವ ಬೇಡುತಲಿ ।

ನುತಿಸುತ ಪರಿಪರಿ ನತರಾಗಿಹರಿಗೆ
ಗತಿಪೇಳದೆ ಸರ್ವಥಾ ನಾ ಬಿಡೆನೆಂದು ॥ 1 ॥

ಅತುಳ ಮಹಿಮನ ದಿನದಲ್ಲಿ ದಿತಿಜ ವಂಶದಲಿ ।
ಉತ್ಪತ್ತಿಯಾಗಿ ಉಚಿತದಲ್ಲಿ ಉತ್ತಮ ರೀತಿಯಲಿ ।
ಅತಿಶಯವಿರುತಿರೆ ಪಿತನ ಬಾಧೆಗೆ
ಮನ್ಮಥಪಿತನೊಲಿಸಿದ ಜಿತಕರಣದಲಿ ॥ 2 ॥

ಪ್ರಥಮ ಪ್ರಲ್ಹಾದ ವ್ಯಾಸಮುನಿಯೆ ಯತಿರಾಘವೇಂದ್ರ ।
ಪತಿತೋದ್ಧಾರಿಯೇ ಪಾವನಕಾರಿಯೆ ।
ಕರಮುಗಿವೆನು ದೊರೆಯೇ ।
ಕ್ಷಿತಿಯೊಳು ಗೋಪಾಲವಿಠ್ಠಲನ ಸ್ಮರಿಸುತ
ಪ್ರತಿಮಂತ್ರಾಲಯದೊಳು ಅತಿ ಮೆರೆವ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

24. ರಥವನೇರಿದ ಚಂದ್ರ । ಶ್ರೀರಾಘವೇಂದ್ರ

ರಥವನೇರಿದ ಚಂದ್ರ । ಶ್ರೀರಾಘವೇಂದ್ರ ॥ ಪ ॥

ನೋಡಿ ಪಾಡು ಕುಣಿದಾಡಿ ಭಜನೆ ಮಾಡು ।
ಬೇಡಿದ ವರ ಕೊಡುವ ॥ ಅ.ಪ ॥

ಕಂಬದಿ ನರಹರಿ ಬರಿಸಿದ ಕಂದ ।
ಕುಂಭಿಣಿ ಪತಿ ಕುಹ ಯೋಗವ ಕಳೆದ ।
ನಂಬಿದವರ ಪೊರೆವ । ನಂಬಿದವರ ಪೊರೆವ ॥ 1 ॥

ಆದ್ಯ ಸತ್ಯಾಗ್ರಹಿ ಭಕ್ತ ಶಿರೋಮಣಿ ।
ಉದ್ಗ್ರಂಥಗಳನು ರಚಿಸಿದ ದಿನಮಣಿ ।
ಮಧ್ವ ಮತೋದ್ಧಾರಾ । ಮಧ್ವ ಮತೋದ್ಧಾರಾ ॥ 2 ॥

ಭೂಪತಿ ವಿಠಲನ ಪ್ರೀತ ವಿಖ್ಯಾತ ।
ಆಪದ್ಬಾಂಧವ ಅನಾಥ ನಾಥ । ರಥೋತ್ಸವದಿ ಮೆರೆವ ।
ರಥೋತ್ಸವದಿ ಮೆರೆವ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

25. ಈತನೇ ಪ್ರಹ್ಲಾದನು। ಗುರುರಾಯ ॥

ಈತನೇ ಪ್ರಹ್ಲಾದನು। ಗುರುರಾಯ ॥
ಈತನೇ ಪ್ರಹ್ಲಾದ ಭೂತಳದೊಳು ಮೆರೆವ ।
ಉತ್ತಮ ಭಕುತಿಗೆ ಎತ್ತಿ ವರವ ಕೊಡುವ ॥ ಅ.ಪ. ॥

ನಿತ್ಯ ನಿತ್ಯದಲ್ಲಿ ನಿತ್ಯ ವ್ಯಾಪಕನೆಂದು।
ನಿತ್ಯ ಶ್ರೀಹರಿಯ ಪ್ರಕಾಶ ತೋರುತಿಹನು ॥ 1 ॥

ಸಡಗರದಲಿ ಬಂದು ಸುಖಶಾಸ್ತ್ರಕರಪಿಡಿದು ।
ಪೊಡವಿಯೊಳಗೆ ತಾನೆ ಹರಿನಾಮ ರಸ ಕುಡಿದ ॥ 2 ॥

ಹಸಿವೆತೃಷೆಯಿಂದ ವರವೀವ ರಾಘವೇಂದ್ರ ।
ವಸುಧಿಯೊಳಗೆ ಭೀಮೇಶಕೃಷ್ಣನದಾಸ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

26. ಮುನಿಯ ನೋಡಿರೋ ಮುಕುತಿ ಧನವ ಬೇಡಿರೋ

ಮುನಿಯ ನೋಡಿರೋ ಮುಕುತಿ ಧನವ ಬೇಡಿರೋ ॥ ಪ ॥

ಜನುಮ ರಹಿತನಾಗಿ ನಿಂದು ಘನವರ ವೀರ ರಾಘವೇಂದ್ರ ॥ ಅ. ಪ. ॥
ಸಂತರಗೂಡಿ ಪಂಥವನಾಡಿ ಸಕಲ ಚಿಂತೆಯನ್ನು ಬಿಟ್ಟು ।

ಅಂತರಂಗದಲ್ಲಿ ಹರಿಯ ಚಿಂತಿಸಿ ಚಿತ್ತದಲ್ಲಿ ॥ 1 ॥

ಗೋಲಕತ್ರಯ ಇನ್ನು ಕೇಳು ನಿರ್ಣಯ ।
ಶೀಲಮೂರ್ತಿ ಸಹಿತ ಇಪ್ಪನಿಲ್ಲಿ ಬಹಳ ವರವೀವ ॥ 2 ॥
ಮಂದಜಗವನು ಪೊರೆಯೆ ಒಂದು ರೂಪದಿ ।
ಸುಂದರಾಂಗ ಗೋಪಾಲವಿಠಲ ತಂದು ಫಲವನೀವ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

27. ಭೋ ಯತಿವರದೇಂದ್ರಾ ಶ್ರೀಗುರು ರಾಯರಾಘವೆಂದ್ರಾ

ಭೋ ಯತಿ ವರದೇಂದ್ರಾ ಶ್ರೀ ಗುರು ರಾಯ ರಾಘವೆಂದ್ರಾ ।

ಕಾಯೋ ಎನ್ನ ಶುಭ ಕಾಯ ಭಜಿಸುವೆನು
ಕಾಯ್ವ ತಾಪಕೆ ಚಂದ್ರಾ ॥ ಪ ॥

ನೇಮವು ಎನಗೆಲ್ಲಿ ಇರುವುದು ಕಾಮಾಧಮನಲ್ಲಿ ।
ಶ್ರೀ ಮಹಾಮಹಿಮನೆ ಪಾಮರ ನಾ ನಿನ್ನ ನಾಮ ಒಂದೇ ಬಲ್ಲೇ ॥ 1॥

ಕಂಡ ಕಂಡ ಕಡೆಗೆ ತಿರುಗಿ ಬೆಂಡಾದೆನೊ ಕೊನೆಗೆ ।
ಕಂಡ ಕಂಡವರ ಕೊಂಡಾಡುತ ನಿಮ್ಮ ಕಂಡೆ ಕಟ್ಟಕಡೆಗೆ ॥ 2 ॥

ಮಂತ್ರವ ನಾನರಿಯೇ ಶ್ರೀಮನ್ ಮಂತ್ರಾಲಯ ದೊರೆಯೇ ।
ಅಂತರಂಗದೊಳ್ ನಿಂತು ಪ್ರೇರಿಸೋ ಅನಂತಾದ್ರೀಶ ದೊರೆಯೇ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

28. ರಾಘವೇಂದ್ರ ಗುರುವೇ ನೀವೇ ಎಂದಿಗೂ ನಮ್ಮ ಗುರುವೇ

ರಾಘವೇಂದ್ರ ಗುರುವೇ ನೀವೇ ಎಂದಿಗೂ ನಮ್ಮ ಗುರುವೇ ॥ ಪ ॥

ವಿಷಯ ವಶನಾಗಿ ಇರುವೆ ಪಶುವಿನಂದದಲಿ ॥
ಆಶೆ ಬಿಡಿಸಿ ನಿಜ ದೋಷವ ಕಳೆದು,
ನೀವಾಸುದೇವನ ಪಾದ ಸ್ಮರಣೆ ಮಾಡುವಂತೆ ॥ 1 ॥

ಪಾಪ ಕರ್ಮ ನಾನು ಎಂದಿಗೂ ಪಾಪ ಬಿಡಿಸೊ ನೀನು।
ಅಪಾರ ಮಹಿಮನ ಶ್ರೀಪಾದ ತೋರಿಸಿ ಪಾಪಿಯ
ಸಂಗದಿಂದ ದೂರ ಮಾಡೊ ಎನ್ನ ॥ 2 ॥

ಕರುಣಿ ಎನ್ನ ಕರುಣಿ ಶರಣನ ಮರೆಯಬೇಡ ಕರುಣಿ ।
ಕರುಣಾಕರ ರಂಗ ಶ್ರೀಕರವಿಠಲನ ।
ಸ್ಮರಣೆಯನ್ನು ಕೊಟ್ಟು ನಿರುತದಿ ಸಲಹೋ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

29. ಗುರು ರಾಘವೇಂದ್ರರ ಚರಣಕಮಲವನ್ನು। ಸ್ಮರಿಸುವ ಮನುಜರಿಗೆ

ಗುರು ರಾಘವೇಂದ್ರರ ಚರಣಕಮಲವನ್ನು ।
ಸ್ಮರಿಸುವ ಮನುಜರಿಗೆ ॥ ಪ ॥

ಕರೆಕರೆಗೊಳಿಸುವ ದುರಿತ ದುಷ್ಕೃತವೆಲ್ಲ ।
ಕರಿಯು ಸಿಂಹನ ಕಂಡ ತೆರವಾಗುವುದಯ್ಯ ॥ ಅ ॥

ಹರಿಯೆ ಸರ್ವೋತ್ತಮ ಸಿರಿಯು ಆತನ ರಾಣಿ ।
ಪರಮೇಷ್ಠಿ ಮರುತರೆ ಗುರುಗಳೆಂದು ।

ಗರುಡಶೇಷರುದ್ರ ಸಮರೆಂದು ಸ್ಥಾಪಿಸಿ ।
ಸ್ಥಿರತಾರತಮ್ಯ ಪಂಚಭೇದ ಸತ್ಯವೆಂಬ ॥ 1 ॥

ರಾ ಎನ್ನೆ ದುರಿತರಾಶಿಗಳ ದಹಿಸುವ ।
ಘ ಎನ್ನೆ ಘನಜ್ಞಾನ ಭಕುತಿ ಈವ ।
ವೇಂ ಎನ್ನೆ ವೇಗದಿ ಜನನಮರಣ ದೂರ ।
ದ್ರ ಎನ್ನೆ ದ್ರವಿಣಾರ್ಥ ಶ್ರುತಿ ಪ್ರತಿಪಾದ್ಯನ ಕಾಂಬ ॥ 2 ॥

ವರ ತುಂಗಾತೀರ ಮಂತ್ರಾಲಯ ಪುರದಲ್ಲಿ ।
ಪರಿಪರಿ ಸೇವೆ ಭೂಸುರರಿಂದ ಕೊಳುತ ।
ಸಿರಿಯರಮಣ ನಮ್ಮ ಗೋಪಾಲವಿಠಲನ ।
ಚರಣ ಸೇವಿಸುತಿಪ್ಪ ಗುರು ಶಿಖಾಮಣಿಯಾದ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

30. ಪೊಂದಿ ಬದುಕಿರೋ ರಾಘವೇಂದ್ರರಾಯರ

ಪೊಂದಿ ಬದುಕಿರೋ ರಾಘವೇಂದ್ರರಾಯರ ।
ಕುಂದದೆಮ್ಮನು ಕರುಣದಿಂದ ಪೊರೆವರ ॥ ಪ ॥

ಅಲವ ಬೋಧರ ಸುಮತ ಜಲಧಿ ಚಂದಿರ ।
ಗೆಲಿದು ಭಕ್ತರ ಕಾಯ್ವ ಸುಲಭ ಸುಂದರ ॥ 1 ॥

ಗುರು ಸುಧೀಂದ್ರರ ವಿಮಲ ಶರಜನೆನಿಪರ ।
ಸ್ಮರಿಸಿ ಸ್ಮರುಚಿರ ವಿಮಲ ಚರನ ಪುಷ್ಕರ ॥ 2 ॥

ಭೂತಭಾವನಾ ಜಗನ್ನಾಥವಿಠಲನಾ ।
ಪ್ರೀತಿಪಾತ್ರನಾ ನಂಬಿರೀತನನುದಿನಾ ॥ 3 ॥

31. ಕರುಣಿಗಳೊಳಗೆಣೆಗಾಣೆನೋ ನಿನಗೆ ಸದ್ಗುರುವರ ರಾಘವೇಂದ್ರ

ಕರುಣಿಗಳೊಳಗೆಣೆಗಾಣೆನೋ ನಿನಗೆ
ಸದ್ಗುರುವರ ರಾಘವೇಂದ್ರ ॥ ಪ ॥

ಚರಣಕಮಲವನು ಮೊರೆಹೊಕ್ಕ ಸುಜನರ ।
ಹರಕೆಯ ನಿರುತದಲೀವೆ ನೀ ಕಾವೆ ॥ ಅ ॥

ರಾಘವೇಂದ್ರ ಗುರುವೆ ಗತಿಯೆಂದನುರಾಗದಿಂದಲಿ ಭಜಿಪ ।
ಭಾಗವತರ ದುರಿತೌಘಗಳ ಅಳಿದು ।
ಚೆನ್ನಾಗಿ ಸಂತೈಸುವೆ ನೀ ಸನ್ಮೌನಿ ॥ 1 ॥

ಸುಧೀಂದ್ರಯತಿಕರ ಪದುಮ ಸಂಭವ ।
ಮಧುವಧಪದಾಂಬುಜ ಮಧುಪ ।
ತ್ರಿದಶಭೂರುಹದಂತೆ ಬುಧಜನರಿಚ್ಛಿತ ।
ಒದಗಿ ಪಾಲಿಸಿ ಪೊರೆವ ಅಸ್ಮದ್ಗುರುವೆ ॥ 2 ॥

ಕುಧರದೇವನ ದಿವ್ಯರದನದಿ ಜನಿಸಿದ
ನದಿಯ ತೀರದಿ ಶೋಭಿಪ ।
ಸದಮಲ ಘನಮಂತ್ರಸದನನಿಲಯ
ಜಿತಮದನ ಶ್ರೀ ಜಗನ್ನಾಥವಿಠಲದೂತ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

32. ವೃಂದಾವನ ನೋಡಿರೋ । ಶ್ರೀರಾಯರ

ವೃಂದಾವನ ನೋಡಿರೋ । ಶ್ರೀರಾಯರವೃಂದಾವನ ನೋಡಿರೋ॥ ಪ ॥

ವೃಂದಾವನ ನೋಡಿ ಆನಂದ ಮದವೇರಿ ।
ಚಂದದಿ ದ್ವಾದಶ ಪುಂಢ್ರಾಂಕಿತಗೊಂಬ ॥ ಅ.ಪ. ॥

ತುಂಗಭದ್ರಾ ನದಿಯ ತೀರದಿ ಇದ್ದು ।
ತುಂಗ ಮಂಟಪದ ಮಧ್ಯದಲಿ ।
ಶೃಂಗಾರ ತುಳಸಿ ಪದ್ಮಾಕ್ಷಿಸರಗಳಿಂದ ।
ಮಂಗಳಕರ ಮಹಾಮಹಿಮೆಯಿಂದೊಪ್ಪುವ ॥ 1 ॥
ದೇಶ ದೇಶದಿ ಮೆಚ್ಚುತ ಇಲ್ಲಿಗೆ ಬಂದು ।
ವಾಸವಾಗಿ ಸೇವಿಪ ॥
ಭಾಷೆ ಕೊಟ್ಟಂದದಿ ಬಹುವಿಧ ವರಗಳ ।
ಸೂಸುವ ಕರ ಮಹಾ ಮಹಿಮೆಯಿಂದೊಪ್ಪುವ ॥ 2 ॥

ನಿತ್ಯ ಸನ್ನಿಧಿ ಸೇವಿಪ ಭಕ್ತರಿಗೆಲ್ಲ ।
ಮತ್ತೆ ಅಭೀಷ್ಟೆಯ ಕೊಡುವ ॥
ಸತ್ಯಾದಿ ಗುಣಸಿಂಧು ವೇಂಕಟ ವಿಠ್ಠಲನ ।
ನಿತ್ಯ ಸನ್ನಿಧಿಯಿಂದ ನಿರುತ ಪೂಜೆಯಗೊಂಬ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

33. ಸತತ ಪಾಲಿಸೋ ಎನ್ನ ಯತಿ ರಾಘವೇಂದ್ರ

ಸತತ ಪಾಲಿಸೋ ಎನ್ನ ಯತಿ ರಾಘವೇಂದ್ರ ॥ ಪ ॥

ಪತಿತ ಪಾವನ ಪವನಸುತ ಮತಾಂಬುಧಿ ಚಂದ್ರಾ ॥ಅ.ಪ.॥
ಕ್ಷೋಣಿಯೊಳಗೆ ಕುಂಭಕೋಣ ಕ್ಷೇತ್ರದಿ ಮೆರೆದೆ ।
ವೀಣಾವೇಂಕಟ ಅಭಿಧಾನದಿಂದಾ ।
ಸಾನುರಾಗದಿ ದ್ವಿಜನ ಪ್ರಾಣವುಳುಹಿದ ।
ಏನೆಂದು ಬಣ್ಣಿಸಲಿ ಜ್ಞಾನಿಗಳ ಕುಲತಿಲಕ ॥ 1 ॥

ನಂಬಿದೆನೊ ನಿನ್ನ ಚರಣಾಂಬುಜವ ।
ಮನ್ಮನದ ಹಂಬಲ ಪೂರೈಸೋ ಬೆಂಬಿಡದಲೆ ।
ಕುಂಭಿಣಿ ಸುರನಿಕುರುಂಬವಂದಿತ ಜಿತ ।
ಶಂಭರಾಂತಕ ಶಾತ ಕುಂಭಕಶ್ಯಪ ತನಯ ॥ 2 ॥

ಮಂದಮತಿಗಳ ಸಂಗದಿಂದ ನಿನ್ನ ಪಾದ ।
ಇಂದಿನ ತನಕ ನಾ ಪೊಂದಲಿಲ್ಲಾ ।
ಕುಂದು ಎಣಿಸದೆ ಕಾಯೋ ಕಂದರ್ಪ ಪಿತ ಶ್ಯಾಮ ।
ಸುಂದರ ದಾಸ ಕರ್ಮಂದಿಗಳ ಕುಲವರ್ಯ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

34. ದಯತೋರೋ ದೇವಾ ಗುರುರಾಜನೇ

ದಯತೋರೋ ದೇವಾ ಗುರುರಾಜನೇ ।
ಭಯವಾಗಿದೆನಗೆ ಭವ ಸಾಗವಾಗಿ ॥ ಪ ॥

ಮೋಹಜಾಲದಲ್ಲಿ ಮಂದಬುದ್ಧಿಯಾಗಿ ।
ದೇಹ ಕೊರಗಿತಯ್ಯ ರಾಘವೇಂದ್ರರಾಯಾ ॥ 1 ॥

ಅನ್ನ ವಸನಕ್ಕಾಗಿ ಅನ್ಯದಾಸನಾಗಿ ।
ಬನ್ನಬಟ್ಟೆನಯ್ಯ ಘನ್ನ ವ್ಯಾಸರಾಯಾ ॥ 2 ॥

ಹಠವ್ಯಾಕೋ ಜೀಯಾ ದಿಟಯೋಗಿ ಕಾಯಾ ।
ವಿಠಲೇಶ ಪ್ರೀಯ ಪ್ರಲ್ಹಾದರಾಯಾ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

35. ದಯಮಾಡೋ ದಯಮಾಡೋ

ದಯಮಾಡೋ ದಯಮಾಡೋ ॥ ಪ ॥

ಭಯಕರಸುಮಹದ್ಭಯಹರ ಯತಿವರ ॥ ಅ.ಪ. ॥

ಮೋಕ್ಷದ ಕರುಣಕಟಾಕ್ಷದಿ ಎನ್ನನು
ಈಕ್ಷಿಸಿ ನಿನ್ನ ನಿರೀಕ್ಷಿಸುವಂತೆ । ॥ 1 ॥

ಸತ್ಯಾಭಿದನಪಮೃತ್ಯು ಹರಿಸಿ ಮುದವಿತ್ತು
ಪಾಲಿಸಿದ ಉತ್ತಮ ಎನಗೆ ॥ 2 ॥

ದಾತ ಗುರು ಜಗನ್ನಾಥ ವಿಠ್ಠಲನ
ದೂತಾಗ್ರಣಿ ಸುಖೇತರ ಕಳೆಯೋ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

36. ಗುರುವೇ ವರಹಜ ತಟವಾಸ । ಪುರಿ ಮಂತ್ರಾಧೀಶ

ಗುರುವೇ ವರಹಜ ತಟವಾಸ ।
ಪುರಿ ಮಂತ್ರಾಧೀಶ । ॥ ಪ ॥
ಆರು ಮೊರೆಯಿಡುವೆನು ವರಪದ ಪದುಮಕೆ ।
ಕರುಣದಲ್ಲೆನ್ನ ಮನ ಹರಿಯಲಿ ಇರಿಸೋ ॥ ಅ. ಪ ॥

ಬಾಗಿ ಭಜಿಪೆ ಗುರುವೇ ।
ಎನ್ನಯ ರೋಗ ಹರಿಸು ಪ್ರಭುವೇ ।
ರಾಘವೇಂದ್ರ ದುರಿತೌಘವಿದೂರನೆ ।
ಭೋಗಿಶಯನ ಪದ ರಾಗದಿ ಭಜಿಸುವ ॥ 1 ॥

ಭೂತ ಪ್ರೇತ ಬಾಧೆ । ಬಿಡಿಸುವ ಖ್ಯಾತಿ ನಿಮ್ಮದು ತಿಳಿದೆ ।
ದೂತರೆನಿಪ ಜನ ಆತು ನಿಮ್ಮ ಪದ ।
ಪ್ರೀತಿ ಸೇವೆಯಲಿ ಕಾತುರದಿಹರೋ ॥ 2 ॥

ಗುರು ಸುಧೀಂದ್ರ ಕರಜ ।
ತೋರ್ಪುದು ಹರಿಯ ಪಾದ ಬಿಸಜ ॥
ವರಸುಹೃದ್ಗ ಗುರುಗೋವಿಂದವಿಠಲನ ।
ಚರಣಸರೋಜವ ನಿರುತ ಭಜಿಪ ಗುರು ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

37. ದಿನಕರನುದಿಸಿದನು ಧರೆಯೊಳಗೆ

ದಿನಕರನುದಿಸಿದನು ಧರೆಯೊಳಗೆ ।
ದಿನಕರನುದಿಸಿದನು ॥ ಪ ॥

ದಾನವ ಕುಲದಲ್ಲಿ ಕ್ಷೋಣಿಯೊಳಗೆ ।
ದಿನಕರನುದಿಸಿದನು ॥ ಅ.ಪ.॥

ಪ್ರಥಮ ಪ್ರಲ್ಹಾದನಾಗಿ ಅವತಾರ ಮಾಡಿ ।
ಸತತ ಹರಿಯನುತಿಸಿ । ಮತಿಹೀನನಾದ ತಂದೆಗೆ ನರಹರಿ ರೂಪವ ।
ರತಿಯಿಂದ ತೋರಿದ ಪ್ರಲ್ಹಾದ ರಾಜರೆಂಬೋ ॥ 1 ॥

ವ್ಯಾಸಮುನಿಯು ಎನಿಸಿ ಸೋಸಿಲಿಂದ ವಾಸವನುತನ ಭಜಿಸಿ ।
ದಾಸನೆಂದು ಮೆರೆದೆ ನವವೃಂದಾವನದಿ ।
ಸೋಸಿಲಿ ಕರೆದರೆ ವಾಸಮಾಡುವುದಕ್ಕೆ ॥ 2 ॥

ತುಂಗಭದ್ರೆಯ ತೀರದಿ ಮಂಗಳ ವರಮಂತ್ರಾಲಯ ಸ್ಥಳದಿ ।
ಅಂಗಜಪಿತ ನಮ್ಮ ಐಹೊಳೆ ವೇಂಕಟನ ।
ಕಂಗಳಿಂದಲಿ ಕಂಡೆ ಗುರು ರಾಘವೇಂದ್ರನೆಂಬೋ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

38. ಶರಣರ ಸುರಭೋಜ । ಗುರುರಾಜಾ

ಶರಣರ ಸುರಭೋಜ । ಗುರುರಾಜಾ ॥ ಪ ॥

ವರಮಂತ್ರಾಲಯ ಪುರಮಂದಿರ ತವ
ಸುಂದರ ಮುನೀಂದ್ರ ರವಿ ಸಮತೇಜ ॥ 1 ॥

ಕಾಮಿತಾರ್ಥಗಳ ಕಾಮಧೇನುವಿನ ।
ನೇಮದಿಂದಲಿ ಕೊಡುವ ಮಹಾರಾಜಾ ॥ 2 ॥

ಭೇಷಕೋಟಿ ಸಂಕಾಶನಾದ।
ಕಮಲೇಶ ವಿಠ್ಠಲನ ದಾಸನೇ ಸಹಜ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

39. ಮಂತ್ರಾಲಯ ಮಂದಿರ । ಮಾಂಪಾಲಯ

ಮಂತ್ರಾಲಯಮಂದಿರ । ಮಾಂಪಾಲಯ ॥ ಪ ॥

ಮಧ್ವಾಭಿದ ಮುನಿ ಸದ್ವಂಶೋದ್ಭವ ।
ಅದ್ವೈತಾರಣ್ಯ ಸದ್ವಿತಿಹೋತ್ರ ॥ 1 ॥

ಸುರಧೇನು ಕಲ್ಪತರು ವರಚಿಂತಾಮಣಿ ।
ಶರಣಾಗತ ಜನ ಪರಿಪಾಲಾ ತ್ವಂ ॥ 2 ॥

ಅಭಿನವ ಜನಾರ್ದನ ವಿಠಲನಾ ಪದ ।
ಅಭಿವಂದಿತ ಗುರು ಮುನಿಕುಲೋತ್ತಮ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

40. ನಾನ್ಯಾಕೆ ಚಿಂತಿಸಲಿ ...

ನಾನ್ಯಾಕೆ ಚಿಂತಿಸಲಿ ನಾನ್ಯಾಕೆ ಧೇನಿಸಲಿ
ತಾನಾಗಿ ಶ್ರೀರಾಘವೇಂದ್ರ ಯತಿ ಒಲಿದ ॥ ಪ ॥

ಪೋರತನದವನು ಎರಡು ತೆರೆಗಳಲ್ಲಿ
ದೂರಾಗಿ ಮೊರೆಯು ಅಲ್ಲವೆಂದು ।
ಕಾರುಣ್ಯದಿಂದ ತಮ್ಮಯ ಗುರುತುಗಳ ತೋರಿ
ಧೀರ ತಾ ಕರವನ್ನು ಪಿಡಿದ ಬಳಿಕ ॥ 1 ॥
ಪೂರ್ಣಜಲ ಹರಿವ ವಾಹಿನಿ ಕಂಡು ಬೆದರುವಗೆ
ಕರುಣಧಾರನು ತಾನೆ ಬಂದು ನಿಂದು
ತೂರ್ಣದಲಿ ಕರಪಿಡಿದು ಹರಿಗೋಲವೊಳಗಿಟ್ಟು
ಘೂರ್ಣಿಸಲು ಅವಗೆ ಚಿಂತೆಯುಂಟೆ ॥ 2 ॥

ಏಸು ಜನ್ಮಂಗಳಲ್ಲಿ ಅರ್ಚಿಸಿದೆನೋ ನಾನಿನ್ನು
ವಾಸುದೇವ ವಿಠಲ ಪಾದ ಪದುಮ ।
ಲೇಸಾಗಿ ಈ ಸುಕೃತದಿಂದೆನ್ನ ಹರಿದಾಸ
ಈ ಸುಗುಣ ಗುರುರಾಯ ಎನಗೆ ಒಲಿದ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

41. ಎಂಥಾ ದಯವಂತನೊ ಸಂತಾರನಾಥನೊ

ಎಂಥಾ ದಯವಂತನೊ ಸಂತಾರನಾಥನೊ ॥ ಪ ॥

ಕಂತುಜನಕಾನ ಪ್ರಿಯಾನೋ
ನಂತಾನಂತಾ ಮಹಿಮನೋ ॥ ಅ ॥

ರಮ್ಯಾಗುಣಾಪೂರ್ಣನೋ ಗಮ್ಯಾ ಸಚ್ಚಿರಿತಾನೋ
ನಮ್ಯಾನತರಾ ಪೋರೆವಾನೋ ಈತ ನಮ್ಮಲ್ಲಾರ ಸಲಹೋನೋ ॥ 1 ॥

ಪ್ರಾಣಾವೇಶಾಯುತನೋ ಜಗತ್ರಾಣಾತ್ತಾನಾಗಿಹನೋ
ಕ್ಷೋಣಿಯೊಳ್ವಿಖಾತನೋ ಎನ್ನ ಪ್ರಾಣಾಗಳಿಗೆ ನಾಥನೊ ॥ 2 ॥

ಭೂತಾಳದೊಳು ವಿಖ್ಯಾತನೊ ನಿಜದೂತಾ
ಜನರಿಗೆ ಪ್ರೀತನೊ ನೀತಾ ಗುರುಜಗನ್ನಾಥವಿಠಲ
ಪ್ರೀತಿಯ ತಾ ಪೊಂದಿಹನೋ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

42. ಸುಂದರ ಗುರುರಾಘವೇಂದ್ರಾರ್ಯರೆಂತೆಂಬೋ

ಸುಂದರ ಗುರುರಾಘವೇಂದ್ರಾರ್ಯರೆಂತೆಂಬೋ
ಕರ್ಮಂದಿಗಳರಸನೆ ವಂದಿಸುವೆ ॥ ಪ ॥

ಬಂದ ಭಕುತರ ಅಘವೃಂದ ಕಳೆವ ಗುಣಸಾಂದ್ರ
ಸನ್ನುತ ಮಹಿಮ ಎಂದು ನಾ ನಂಬಿದೆ ॥ ಅ. ಪ. ॥
ಪರಮ ಕರುಣಿ ನಿಜ ಚರಣ ಭಜಕರನು ।
sದ್ಧರಿಸಲನುದಿನ ಪೊರೆವೆನೆಂದೂ ।
ಕರವ ಮುಗಿದುತ್ವರ ಪರಿಯಲಿ ನಿನ್ನಾಲ್ಪರಿಯುವೆ ।
ದೈನ್ಯದಿ ಬಾಯ್ ತೆರೆಯುವೆ । ಕರ ಪಿಡಿ ಎಂದು ಕರೆಯುವೆ ।
ನಿನ್ನ ಸರಿ ಪೊರೆವಂಥ ದೊರೆಗಳ ಕಾಣೆ ಮದ್ಗುರುವೆ ।
ಎನ್ನಂಥ ಪಾಮರ ನರರ ಕಾವುದು ನಿನಗೆ ಅಚ್ಚರಿಯೇ ।
ವಿಜಯೀಂದ್ರ ಕರಜರ ವರಕುಮಾರಕನೆನಿಸಿ ಘನ ತರುವೆ ।
ವರಯೋಗಿವರ್ಯನೆ ॥ ನಿರುತ ವೃಂದಾವನದಿ ರಾಜಿಪ ।
ಮೆರೆವ ಮಂಗಲ ಚರಿತ ತವ ಪದ ।
ಸ್ಮರಣೆ ಸಂತತ ನೀಡುಮರೆಯದೆ ಹರುಷದಲಿ ನಿರ್ಜರರ ತರುವೆ॥ 1 ॥

ಘೋರ ದುರಿತವೆಂಬೋ ವಾರಿಧಿಯೊಳಗೀಸ–।
ಲಾರೆನುತ ದಯ ಬಾರದೇನೋ ।
ಪೋರನೆನುತಲಿ ತಾತ್ಸಾರ ಮಾಡದೆ ದಡ ಸೇರಿಸೋ । ಬಿನ್ನಪವ
ವಿಚಾರಿಸೋ ಮನ್ನಿಸಿ ಮಾರ್ಗ ತೋರಿಸೋ ।
ಮೀರಿರುವ ಕಡು ಕಾಮಾದಿ ಖಳರ ಬೇರುಗಳನಳಿಸೋ ।
ನಿನ್ನೊಳು ನಿರಂತರ ಸೂರಿ ಭಕುತರ ದಾರಿಯೊಳು ನಿಲಿಸೋ ।
ಮನ್ಮನದಭೀಷ್ಟೆಯ ॥ ಭೂರಿ ನಮಿಸುವೆ ಚಾರು ಕಿಟಜಾ ।
ತೀರ ನಿಲಯನೆ ಸಾರಿದವರನು । ಪಾರುಗಾಣಿಪನೆಂದು ಡಂಗುರ ।
ಸಾರುತಿದೆ ಯತಿ ವೀರ ಸಲಿಸೋ ॥ 2 ॥

ಏಸೇಸು ಜನುಮದಿ ಕ್ಲೇಶಗಳನುಭವಿಸಿ
ಘಾಸಿಗೊಳಿಸಿ ಮನ ಬೇಸರಾದೆ । ಹೇಸಿ ವಿಷಯಂಗಳ ಲೇಸು
ತಿಳಿಯದೆ ಮರೆ ಮೋಸದಿ । ದುಷ್ಟರ ಸಹವಾಸದಿ । ಚರಿಸಿದೆ
ಮಂದಹಾಸದಿ । ಸಂತೈಸು ರವಿ ಸಂ–।
ಕಾಶಿ ಜನ ವಿದ್ವಾಂಸ ಸಾದರದಿ ।
ಕಾಷಾಯ ವಸನ ಭೂಷಿತಾಂಗನೆ ವ್ಯಾಸಮುನಿ ಭರದಿ ।
ಗಜರಾಜ ಪುರದಾಧೀಶ ಮುಖರಿಗೆ ತೋಷ ನೀ ಬೆರೆದಿ ।
ಈ ಸಮಯ ನುತಿಸುವೆ ॥ ಆ ಸಮೀರ ಮತಾಬ್ಧಿ ಚಂದಿರ ।
ಶ್ರೀಶ ಗುರು ಇಂದಿರೇಶ ನಂಪ್ರಿಯ। ದಾಸ ಭವ ಭಯ ರಾಶಿ ತರಿದು।
ಉದಾಸೀನದೇ ಪೋಷಿಸೆಮ್ಮನು ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

43. ರೋಗಹರನೆ ಕೃಪಾಸಾಗರ ಶ್ರೀಗುರು

ರೋಗಹರನೆ ಕೃಪಾಸಾಗರ ಶ್ರೀಗುರು ।
ರಾಘವೇಂದ್ರ ಪರಿಪಾಲಿಸೋ ॥ ಪ ॥

ಸಂತತ ದುರ್ಮತಧ್ವಾಂತ ದಿವಾಕರ ।
ಸಂತವಿನುತ ಮಾತ ಲಾಲಿಸೋ ॥ 1 ॥

ಪಾವನಗಾತ್ರ ಸು ದೇವವರನೆ ತವ ।
ಸೇವಕ ಜನರೊಳಗಾಡಿಸೊ ॥ 2 ॥

ಘನ್ನ ಮಹಿಮ ಜಗನ್ನಾಥವಿಠಲರೇಯ ।
ನಿನ್ನಾರಾಧನೆ ಮಾಡಿಸೊ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

44. ಯಾಕೆ ಮೂಕನಾದ್ಯೋ ಗುರುವೇ ನೀ

ಯಾಕೆ ಮೂಕನಾದ್ಯೋ ಗುರುವೇ ನೀ ।
ಯಾಕೆ ಮೂಕನಾದೆ ಲೋಕಪಾಲಕ ಎನ್ನ ।
ಸಾಕುವರ್‍ಯಾರಯ್ಯ ಶ್ರೀಕರರಾಘವೇಂದ್ರಾ ॥ ಪ ॥

ಹಿಂದಕ್ಕೆ ನೀ ಎನ್ನ ಮುಂದೆ ಸುಳಿದೀಗ ।
ಮಂದಿಯೊಳಗೆ ಎನ್ನ ಮಂದನ್ನ ಮಾಡಿದಿ ।
ಬೇಕಾಗದಿದ್ದರೆನ್ನಯಾಕೆ ಕೈಯನು ಪಿಡಿದೆ ।
ಕಾಕುಜನರೊಳೆನ್ನ ನೂಕಿ ಬಿಟ್ಟು ಈಗ ॥ 1 ॥

ನಿನ್ನಂಥಕರುಣಿಲ್ಲ ಎನ್ನಂಥ ಕೃಪಣಿಲ್ಲ।
ಘನ್ನಮಹಿಮನು ನೀ ಎನ್ನನ್ನು ಬಿಟ್ಟೀಗ ।
ಜನನಿಯು ನೀ ಎನಗೆ ಎನ್ನ ಜನಕನಯ್ಯ ।
ಮನ್ನಿಸೋ ನೀ ನಿತ್ಯ ಅನನ್ಯ ಶರಣನಲ್ಲೇ ॥ 2 ॥

ಎಂದಿಗಾದರೂ ನಿನ್ನ ಪೊಂದಿಕೊಂಡವನಲ್ಲೇ
ಇಂದು ನೀ ಬಿಟ್ಟರೆನ್ನ ಮುಂದೆ ಕಾಯುವರ್‍ಯಾರೋ।
ನಾಥನು ನೀನಯ್ಯ ಅನಾಥನು ನಾನಯ್ಯ ।
ನಾಥೋಜಗುರುಜಗನ್ನಾಥವಿಠ್ಠಲ ಪ್ರೀಯ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

45. ಸುವ್ವಿ ಸುವ್ವಾಲಿ ಆಹಾ ಸುವ್ವಿ ಸುವ್ವಾಲಿ

ಸುವ್ವಿ ಸುವ್ವಾಲಿ ಆಹಾ ಸುವ್ವಿ ಸುವ್ವಾಲಿ
ಸುವ್ವಿ ಸಾಧ್ವಿಯರು ರಾಘವೇಂದ್ರರ ಪಾಡಿ ॥ ಪ ॥

ಅಂದಿನ ಕಾಲದ ಮಧ್ವಶಾಸ್ತ್ರದ ಮನಕೆ ತಂದು
ಅಂದದಿ ಟಿಪ್ಪಣಿ ಮಾಡಿದ ದೇವರಾರು ಸುವ್ವಿ ।
ಅಂದು ವಾದಿಸುವ ಜನರನ್ನ ಬಾಯಿಮುಚ್ಚಿಸಿದ
ಚಂದಿರ ವದನನೆ ಈತ ನಮ್ಮ ಗುರುವೇ ಸುವ್ವಿ ॥ 1 ॥

ಅಷ್ಟಾಕ್ಷರಮಂತ್ರವನ್ನು ತಪ್ಪದಲೆ ನಿತ್ಯವಾಗಿ
ನಿಷ್ಠೆಯಿಂದ ಭಜಿಸಲು ಭೂತ ಭಯವು ಸುಟ್ಟಿ
ಕುಷ್ಟರೋಗ ಕ್ಷಯ ಪಾಚಿಡು ಜ್ವರಸನ್ನಿ ಮೊದಲಾದ
ಅಷ್ಟುಪದ್ರವಾಕ್ಷಣ ಬಿಟ್ಟು ಓಡುವವು ಸುವ್ವಿ ॥ 2 ॥

ಇಷ್ಟೇ ಎನ್ನಲು ವಶವಲ್ಲ ಮಹಿಮೆಗಳು ಇನ್ನು ಉಂಟು
ನಷ್ಟು ಮಾಡುವರ ದುರ್ಮತ ದಾರಿದ್ಯ ಸುಟ್ಟಿ
ಸೃಷ್ಟಿಗೊಡೆಯ ಪ್ರಾಣೇಶವಿಠ್ಠಲನೆಂದು ಪೇಳ್ದರು.
ಎಷ್ಟು ಪೇಳಿದರೂ ಎನ್ನಿಂದ ತೀರದು ಸುವ್ವಿ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

46. ನೋಡಿದೆ ಇಂದು ಗುರುರಾಜರ ।

ನೋಡಿದೆ ಇಂದು ಗುರುರಾಜರ ।
ನಾಡಿನೊಳಗೆ ಪ್ರಖ್ಯಾತರಾದರ ॥ ಪ ॥

ಪ್ರಹ್ಲಾದರಾಜರ ಅವತಾರ
ಆಹ್ಲಾದವನು ನೀಡುವರ
ಮೋಹಿನಿ ರೂಪವ ನೋಡಿದರ
ಮೋಹಭವಂಗಳ ನೀಗಿದರ ॥ 1 ॥

ಮಂಚಾಲೆಯಲಿ ನೆಲೆಸಿದರಾ
ಸಂಚಿತಾಗಮಗಳ ತಿಳಿದವರ
ವಂಚಿಸದೆ ಫಲ ನೀಡುವರಾ
ಪಂಚೇಂದ್ರಿಯಗಳು ಜೈಸಿದರಾ ॥ 2 ॥

ಸಿರಿ ಅಜವಿಠಲನ ಜಪಿಸಿದರ
ನರಹರಿ ರೂಪವ ನೋಡಿದರ
ಕರದಲಿ ಜಪಮಣಿ ಎಣಿಸುವರ
ಮರುಕದಿ ಶರಣರಿಗೊಲಿಯುವರ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

47. ಎಂದು ಕರುಣದಿಂದ ನೋಡುವಿ

ಎಂದು ಕರುಣದಿಂದ ನೋಡುವಿ ರಾಘ–
ವೇಂದ್ರ ಎಂದು ನಮಗಾನಂದನೀಡುವಿ ॥ ಪ ॥

ಎಂದು ಕರುಣದಿಂದ ನೋಡುವಿ
ನೊಂದು ತಾಪದಿಂದ ಬಹಳ
ಬೆಂದು ನಿನ್ನ ಕಂದನೆಂತೆಂದು ಪಾದಕೆ ಹೊಂದಿದವನ ॥ ಅ.ಪ ॥

ದೀನನಾನು ಧೆನಿಸವೆನೊ ಅನುದಿನ
ಕಾಮ–ಧೇನು ದಾನಶೂರನೊ॥
ದಾನದ, ಕುಲದ, ನಿಧಾನಿ ಎಂದೆನಿಸಿಕೊಂಬಿ ।
ದಾನದಲ್ಲಿ ಅಗ್ರಗಣ್ಯನ್ನತ ದಾನವ ನೀಡಿ ॥ 1 ॥

ಅಲ್ಪ ನಾನು ಜಲ್ಪಕೆಣಿಸುವೆ ಅ–
ನಲ್ಪ ನೀನು ಕಲ್ಪವೃಕ್ಷಕಲ್ಪನಲ್ಲವೆ
ಅಲ್ಪರಿಗೆ ಅನಲ್ಪ ಫಲ ಅಕಲ್ಪತಾಗಿ ಕಲ್ಪಿಸುವರೆ।
ಆಲ್ಪನವರನಲ್ಪನೆಂದು
ಸ್ವಲ್ಪ ಮನೋವಿಕಲ್ಪವಿಲ್ಲದೆ ॥ 2 ॥

ಗುಣಿಯು ನೀನು ಅಣಿಯು ಇಲ್ಲದ ದು–
ರ್ಗುಣಿಯು ನಾನು ಹಣಿಯೋ
ನೀನು ವಣಿಯೊ ಪಾಪವ ।
ಧಣಿಯೇ ಚಿನ್ನದ ಖಣಿಯೇ ಚಿಂತಾ–
ಮಣಿಯು ನಿನಗೆ ಎಣಿಯು ಇಲ್ಲ
ಗುಣಿ ಅನಂತಾದ್ರೀಶನ ತೋರಿಸು ದಣಿಯಲಾರೆ. ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

48. ತುಂಗಾತೀರದಿ ರಾಜಿಪ ಯತಿಯ। ನೀರೆ ನೋಡೋಣ ಬಾ

ತುಂಗಾ ತೀರದಿ ರಾಜಿಪ ಯತಿಯ।
ನೀರೆ ನೋಡೋಣ ಬಾ । ಬಾ ।
ನೀರೆ ನೋಡೋಣ ಬಾ । ॥ ಪ ॥

ವೃಂದಾವನದೊಳಗಿರುವ ।
ವೃಂದಾರಕರನು ಪೊರೆವ ।
ವೃಂದಗುಣಗಳಿಂ ಮೆರೆವ ।
ವೃಂದಾರಕತರು ಎನಿಸಿದ ಸುಜನಕೆ ॥ 1 ॥

ಮರುತ ಮತಾಂಬುಧಿ ಚಂದ್ರ । ದಿನಕರ ಅಘತಮಕೆ ರವೀಂದ್ರ ।
ದುರುಳ ಮತಾಹಿ ಖಗೇಂದ್ರ ।
ಗುರು ಕರುಣಾಕರ ಶ್ರೀರಾಘವೇಂದ್ರರ ॥ 2 ॥

ರವಿ ಶಶಿ ಕುಜ ಬುಧ ಗುರುವೇ ।
ಕವಿ ರಾಹು ಧ್ವಜ ಗುರುಬಲವೇ ।
ಇವರ ದರುಶನದ ಫಲವೇ ।
ಗುರು ಅಭಿನವ ಜನಾರ್ದನವಿಠಲನ ದಯವೆ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

49. ಸ್ಮರಿಸಿ ಬದುಕಿರೋ ಗುರು ರಾಘವೇಂದ್ರರಾ

ಸ್ಮರಿಸಿ ಬದುಕಿರೋ ಗುರು ರಾಘವೇಂದ್ರರಾ ।
ಚರಣ ಕಮಲವಾ ದುರಿತ ತರಿಯುವಾ ॥ ಪ ॥

ಯಂತ್ರೋದ್ಧಾರರಾ ಅಂತರಂಗರಾ ।
ಮಂತ್ರಮಂದಿರಾ ಕಾಂತಿಭೂತರಾ ॥ 1 ॥

ಮೂಕ ಬಧಿರರಾ ಅನೇಕ ರೋಗಿಯರಾ ।
ನೂಕಿ ತಾಪವ ದುಃಖ ಕಳೆಯುವಾ ॥ 2 ॥

ಗುರು ಗೋವಿಂದವಿಠ್ಠಲನಾ ಚರಣ ಸರಸಿಜಾ ।
ನಿರುತ ಸ್ಮರಿಪರಾ ವರವ ಕೊಡುವರಾ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

50. ರಾಘವೇಂದ್ರ ಗುರುರಾಯಾ ಶುಭಕಾಯ

ರಾಘವೇಂದ್ರ ಗುರುರಾಯಾ ಶುಭಕಾಯ ।
ಕವಿಗೇಯ । ಪಿಡಿಕೈಯ ॥ ಪ ॥

ಪ್ರಥಮಯುಗದಿ ಶ್ರೀಪತಿಯ ಸ್ತಂಭದೊಳು
ಪಿತನಿಗೆ ತ್ವರ ತೋರಿಸಿದ ।
ಪ್ರಲ್ಹಾದ ಶ್ರೀಪಾದ ಕೊಡುಮೋದ ॥ 1 ॥

ತುಂಗಭದ್ರ ಸುತರಂಗಿಣಿ ತೀರದಿ ।
ಕಂಗೊಳಿಸುವ ಯತಿನಾಥ ।
ದ್ವಿಜವ್ರಾತನುತದಾತ ಪ್ರಖ್ಯಾತ ॥ 2 ॥

ಕಾಮಧೇನು ಸಮಕಾಮಿತಕಾಯಕ ।
ಶ್ಯಾಮಸುಂದರನ ದಾಸ ।
ಅಘನಾಶ ನತಪೋಷ ಮುನಿವ್ಯಾಸ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

51. ಪರಮ ಮಂಗಳ ಮೂರುತಿ ದಿವ್ಯಕೀರುತಿ

ಪರಮ ಮಂಗಳ ಮೂರುತಿ ದಿವ್ಯಕೀರುತಿ ॥ ಪ ॥

ಕರುಣಾಪಯೋನಿಧಿ ಕರವ ಪಿಡಿದು ಎನ್ನ।
ಕರಣಶುದ್ಧನ ಮಾಡೊ ಶರವನು ಬಾಗಿಪೆ ॥ 1 ॥

ರಾಘವೇಂದ್ರರ ಪಾದ ರಾಘವ ವ್ಮತಿಯಲ್ಲಿ ।
ಶ್ಲಾಘನ ಮಾಡಿದ ಮಾಗಧಾರಿಯ ಪ್ರಿಯ ॥ 2 ॥

ನಿರುತ ಮಂತ್ರಾಲಯ ಪುರವಾಸ ಅಘನಾಶ ।
ಸಿರಿ ವಿಜಯವಿಠಲನ ಚರಣಭಜಿಪ ಗುರುವೆ. ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

52. ರಾಘವೇಂದ್ರ ರಾಯರಡಿಗೆ

ರಾಘವೇಂದ್ರ ರಾಯರಡಿಗೆ ಬಾಗಿ ನಮಿಸಿರೊ।
ನೀಗಿ ಭವದ ಬಂಧದಿಂದ ಮುಕ್ತರಾಗಿರೊ ॥ ಪ ॥

ಶಂಕೆಯಿಲ್ಲದೆ ವರಗಳ ಕೊಟ್ಟು ಚಿಂತೆ ಹರಿಸುವರ।
ಕಂತುಪಿತನ ಭಕ್ತರಿಗೆ ಸಂತಸ ನೀಡುವರ।
ಪಂಕಜನಾಭನ ಕಿಂಕರರ ಚಿಂತೆಯ ನೀಗುವರ।
ಶಂಕುಕರ್ಣರಿವರೆನ್ನುತ ಕಂಕಣ ಕಟ್ಟಿಹರ ॥ 1 ॥

ಕಂಗೋಳಿಪ ಕೋರೆಯಿಂದ ಬಂದ ಭದ್ರೆಯ ತೀರದಿ।
ಚಂದದಿಂದ ಮೆರೆವ ರಾಘವೇಂದ್ರರಾಯರ
ಕೊಂಡಾಡಿದರೆ ಮನಕೆ ಸಂಭ್ರಮ ನೀಡುವರ
ಪೊಂದಿದ ಪಾಪಗಳಕಳೆದು ಚಂದದಿ ಸಲಹುವರ ॥ 2 ॥

ಕರುಣದಿಂದ ಭಕ್ತರನ್ನೆಲ್ಲ ಸಲಹುತೀರ್ಪರ
ಕಮಲನಾಭವಿಠಲನಂಘ್ರಿ ಭಜನೆ ಮಾಳ್ಪರ
ಕನಕಮಯ ಮಂಟಪದಲಿ ಮೆರೆವತೀರ್ಪರ
ಕರೆದು ಪಾರ್ಥರ್ಿಸುವವರ ಮನಕೆ ಹರುಷ ತೋರ್ಪರ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

53. ಎಂಥಾ ಚಲುವನಮ್ಮ ಗುರುವರ ಎಂಥಾ ಚಲುವನಮ್ಮ

ಎಂಥಾ ಚಲುವನಮ್ಮ ಗುರುವರ ಎಂಥಾ ಚಲುವನಮ್ಮ ॥ ಪ ॥

ಶಾಂತಮೂರುತಿ ಸುಕುಮಾರ ಶರೀರನು ।
ಸಂತತ ವಾಂಛಿತವೀಯುವ ಯತಿವರ ॥ ಪ ॥

ಲೋಕದ ಸೌಂದರ್ಯಸಾರವಸೇರಿಸಿ।
ಶ್ರೀಕಮಲಾಸನಪ್ರೇಮದಿ ಸೃಜಿಸಿದ।
ಆಖಯಾದುಸುತ ವರ ಪ್ರಹ್ಲಾದನ।
ಸಾಕಾರನು ಜಗನ್ಮೋಹಕ ಶ್ರೀಗುರು ॥ 1 ॥

ತುಂಗಭದ್ರಾ ಸುತರಂಗಿಣಿ ತೀರದಿ।
ಮಂಗಳಕರ ಮಂತ್ರಾಲಯ ನಿಲಯನು।
ಸಿಂಗರಿಸಿಹ ಬೃಂದಾವನಮಧ್ಯದಿ।
ಕಂಗೋಳಿಸು ರಾಘವೇಂದ್ರ ಮುನೀಂದ್ರನು ॥ 2 ॥

ಒಂದಾರು ಶತವರ್ಷ ವೃಂದಾವನದಿ
ವೃಂದರಘಕಳೆವನು ಬಿಡದಲೆ ॥
ಕುಂದದೆ ಪುತ್ರಕಳತ್ರ ಮಂಗಳವಿತ್ತು।
ಚಂದದಿ ಪಾಲಿಪ ಕಮಲೇಶನ ಪ್ರಿಯಶ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

54. ಎಂಥಾ ಧನ್ಯನೊ...

ಎಂಥಾ ಧನ್ಯನೊ ಗುರುವಿನ್ನೆಂಥ ಮಾನ್ಯನೊ ॥ ಪ ॥

ಕಂತುಪಿತನ ನಾಮಸ್ಮರಣೆ ಸಂತತವು ಮಾಡುತಿರುವ ॥ ಅ.ಪ ॥

ಭಕ್ತಿಯಿಂದ ಸೇವೆಗೈವ, ಭಕ್ತರಘವ ನೀಗಿ ಪೊರೆವ ।
ಭಕ್ತಿಬಂಧುವೆನಿಸಿ ಮೆರೆವ ಮುಕ್ತಿಮಾರ್ಗ ಸತತ ತೋರ್ವಆ ॥ 1 ॥

ಕರ್ಮಶೀಲನಾಗಿ ಸತತ ಧರ್ಮಮಾರ್ಗವನ್ನು ಸಾರಿ।
ಕರ್ಮದೋಷಗಳನು ಹರಿವ ನಿರ್ಮಲಾಂಗ ರಾಘವೇಂದ್ರ ॥ 2 ॥

ಕಾಮಿತಾರ್ಥವಿತ್ತು ಕಾಯ್ವ ಶ್ಯಾಮಲಾಂಗ ಕೃಷ್ಣವಿಠಲ ।
ಸವಾಮಿಯನ್ನು ಪೂಜಿಸುವ ಪ್ರೇಮಮಯನೇ ರಾಘವೇಂದ್ರನೆ । ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

55. ರಾಘವೇಂದ್ರ ಗುರುರಾಯಾ ಬಾಗಿ ನಮಿಸುವೆ ಕೈಯ ।

ರಾಘವೇಂದ್ರ ಗುರುರಾಯಾ ಬಾಗಿ ನಮಿಸುವೆ ಕೈಯ ।
ಬೇಗಪಿಡಿದು ಪಾಲಿಸಯ್ಯ । ಭಾಗವತ ಜನಪ್ರೀಯ ॥ ಪ ॥

ತುಂಗಭದ್ರಾಸುತೀರದಿ । ಶೃಂಗಾರ ಸದ್ವೃಂದಾವನದಿ ।
ಪಿಂಗಳಸನ್ನಿಭಾಂಗದಿ । ಕಂಗೊಳಿಪ ದಯಾಂಬುಧಿ ॥ 1 ॥

ಮರುತಾವೇಶ ಯಮಿವರಿಯಾ । ದುರಿತಾಹಿ ವೈನತೇಯ ।
ಪರಮೋದಾರಿ ಪರಿಮಳಾರ್ಯಾ । ತರುಳನೆಂದು ಕರುಣಿಸಯ್ಯ ॥ 2 ॥
ಶ್ಯಾಮಸುಂದರ ಭಕ್ತಾಗ್ರಣಿ । ಭೂಮಿಯೊಳು ನಿನಗಾರೆಣೆ ।
ಕಾಮಿತಾರ್ಥ ಚಿಂತಾಮಣಿ । ಸ್ವಾಮಿ ಶ್ರೀವ್ಯಾಸಸನ್ಮೌನಿ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

56. ನಿನ್ನ ಅಂಗಳದೊಳಗೆ ಹಿಡಿ ಅನ್ನ ಹಾಕೋ

ನಿನ್ನ ಅಂಗಳದೊಳಗೆ ಹಿಡಿ ಅನ್ನ ಹಾಕೋ
ಘನ್ನ ಶ್ರೀಗುರುರಾಘವೇಂದ್ರ ಸಂಪನ್ನ ॥ ಪ ॥

ವರುಷ ವರುಷಕೆ ನಿನ್ನ ದರುಶನವ ದಯಮಾಡೋ ।
ದುರಿತ ನಾಶನಗೈದು ಪರಿಶುದ್ಧಗೊಳಿಸೋ ।
ಅರಿತು ಅರಿಯದೆ ಗೈವ ಪಾಪಕರ್ಮವ ಕಳೆದು ।
ನಿರುತ ಶ್ರೀಹರಿಕೃಪೆಗೆ ಪಾತ್ರನಾಗಿರಿಸೋ ॥ 1 ॥

ನಿನ್ನ ಭಕುತರ ಪಾದ ರಜದೊಳೀಡಾಡಿಸೋ ।
ನಿನ್ನ ಗುಣಕೀರ್ತನೆಯ ಕಿವಿಗಳಲಿ ನಿಲಿಸೋ ।

ನಿನ್ನ ಪಾದೋದಕದಿ ಪಾವನ್ನ ಮಾಡೆನ್ನ ।
ನಿನ್ನ ರಘುಪತಿ ದಿವ್ಯ ದರುಶನವ ಕೊಡಿಸೋ ॥ 2 ॥

ಏನು ಬೇಡಲಿ ನಾನು ದಾನಿ ಕರ್ಣನೆ ನಿನ್ನ ।
ಜ್ಞಾನಿ ಸದ್ಗುರು ಕಲ್ಪವೃಕ್ಷ ಸುರಧೇನು ।
ದೀನರಕ್ಷಕ ವಿಠಲೇಶ ಕರುಣಾಭರಣ ।
ಸಾನುರಾಗದಿ ನಿನ್ನ ಸೇವಕರೊಳಿರಿಸೋ ॥ 3 ॥

57. ಹೊಡಿ ನಗಾರಿ ಮ್ಯಾಲೆ ಕೈಯ । ಹೊಡಿ ನಗಾರಿ ಮ್ಯಾಲೆ ಕೈಯ

ಹೊಡಿ ನಗಾರಿ ಮ್ಯಾಲೆ ಕೈಯ । ಹೊಡಿ ನಗಾರಿ ಮ್ಯಾಲೆ ಕೈಯ
ಪೊಡವಿಯೊಳಗೆ ಗುರುರಾಘವೇಂದ್ರರಿಗೆ
ಒಡೆಯಗೆ ಸಮರಿಲ್ಲವಿಲ್ಲೆಂದು ॥ ಅ.ಪ ॥

ಖಡುಗ ಸೆಳೆಸುಪಲ್ಕಡಿದು ಕಡುಪಾಪಿ ನಿ–
ನ್ನೊಡೆಯನ ತೋರಿಸೆ ಪೊಡಮಿಡಲಾಗಿ ।
ಒಡನೆ ಕಂಬದಿದೊಡೆದು ಬಂದ
ಜಗದೊಡೆಯನೆತೋರಿದ ಪ್ರಹ್ಲಾದನಿವನೆಂದು ॥ 1 ॥

ವರ ಮಂತ್ರಾಲಯ ಮಂದಿರನೀತ।
ಪರಿಪರಿಮಹಿಮೆಯ ತೋರಿಸುವಾತ।
ಪರಮಹಂಸ ಕುಲದೀಪಕ ದಿನಮಣಿ।
ಶರಣಜನಾವನ ಮಂದಾರನಿವನೆಂದು ॥ 2 ॥

ಮೂಲರಾಮ ಕಮಲೇಶನ ದಯಿಂದಾ।
ನಿಲದೇವನಾವೇಶದಿ ಮೆರೆದು.॥
ಒಲುಮೆಯಿಂದ ಪುರುಷಾರ್ಥಕೊಡುವ ಪ್ರಭು।
ಇಳಿಯೊಳಿವಗೆ ಸಮರಿಲ್ಲವಿಲ್ಲೆಂದು ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

58. ಭಕುತನ ಭಾಗ್ಯವಿದು ಗುರುರಾಜರ

ಭಕುತನ ಭಾಗ್ಯವಿದು ಗುರುರಾಜರ।
ಭ್ರಾಂತಿಯನೀಗಿಸಿ ಶಾಂತಿನೀಡುತ।
ಚಿಂತೆಯ ಹರಿಸುತ ಕಂತುಪಿತನದಾಸ॥

ಸಂತರಭೀಷ್ಟರ ನಿರಂತರ ಸಲಿಸುವ।
ಶಾಂತಮೂರುತಿ ನಮ್ಮ ರಾಘವೇಂದ್ರರ ಪೂಜೆ ॥ 1 ॥

ಅರ್ತಿಯಿಂದಲಿ ತನ್ನ ಪ್ರಾರ್ಥನೆಗೈಯ್ಯುವ ।
ಆರ್ತರಾದವರ ಇಷ್ಟಾರ್ಥವ ಸಲಿಸುತ॥
ಆರ್ತರಕ್ಷಕ ನಮ್ಮ ಗುರುರಾಘವೇಂದ್ರರ।
ಕೀರ್ತಿಯ ಪಾಡುತ ಪ್ರಾರ್ಥನೆಗೈವುದು. ॥ 2 ॥

ಕರುಣಾಮೃತದ ಧಾರೆಯ ಹರಿಸುತ।
ಶರಣರ ಪೊರೆಯುವರ ಪರಮದಯಾಕರ।
ಕರುಣಾಭರಣ ಶ್ರೀಕೃಷ್ಣವಿಠಲನ ಚರಣಸೇವೆಯ
ಮಾಳ್ಪ ರಾಘವೇಂದ್ರರ ಭಜನೆ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

59. ಯತಿವರ್ಯ ಯತಿವರ್ಯ

ಯತಿವರ್ಯ ಯತಿವರ್ಯ
ಪ್ರಣವಪಾದ್ಯ ಹರಿಗುಣ ಸಂಪೂರ್ಣನ।
ಗುಣವರ್ಣನ ಸುಜ್ಞಾನವನೀಯೊ ॥ 1 ॥

ಅನ್ಯನಲ್ಲ ನಾ ನಿನ್ನವರವನ್ನೈ ।
ಘನಮಹಿಮ ಸಂಪನ್ನ ಪೊರೆಯೊ ಗುರು ॥ 2 ॥

ಭೂಮಾರ್ಣವಗುರು, ಗೋವಿಂದವಿಠಲನ।
ಕಾಮಿಪೆ ಮನ್ಮನ ಸೀಮೆಯಲಿರಿಸೋ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

60. ನಿನ್ನ ನಂಬಿದೆ ರಾಘವೇಂದ್ರ ।

ನಿನ್ನ ನಂಬಿದೆ ರಾಘವೇಂದ್ರ । ನೀ ।
ಎನ್ನ ಪಾಲಿಸೋ ಸಂಯಮೀಂದ್ರ ॥ ಪ ॥

ಸನ್ನುತ ಸರಸ ಕವೀಂದ್ರ ಪ್ರಸನ್ನ ಹೃತ್ಕುಮುದಕೆ ಚಂದ್ರ ॥ ಅ.ಪ. ॥

ಭೇದಮತಾಬ್ಧಿ ವಿಹಾರಾ । ಕುವಾದಿ ಮದವನ ಕುಠಾರಾ ।
ಸಾಧಿತಖಿಳ ತತ್ತ್ವಸಾರ । ಮಧುಸೂದನ ಚಂದ್ರ ಚಕೋರ ॥ 1 ॥

ಭಾರತೀಶ ಪದಾಬ್ಜ ಭೃಂಗ ಖಗಾರಿಯ ಕರುಣಾಂತರಂಗ ।
ಸಾರಿದವರ ಭವ ಭಂಗ । ಸಮೀರ ಮತಾಂಬುಜ ಪತಂಗ ॥ 2 ॥

ಸುಧೀಂದ್ರ ಯತಿಕರ ಜಾತಾ । ವಿಬುಧ ಸಂಘ ಸತತ ಸಮೇತ ।
ವಿಧಿಪಿತ ಗುರು ಜಗನ್ನಾಥವಿಠಲನ ಅಧಿಕನೆಂದೊರೆದ ವಿಖ್ಯಾತ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

61. ನೋಡಿದೆ ಗುರುರಾಯರನ್ನ

ನೋಡಿದೆ ಗುರುರಾಯರನ್ನ। ಈ।
ರೂಡಿಯೊಳಗೆ ಮೆರೆವೊ ಸಾರ್ವಭೌಮನ್ನ ॥ ಪ ॥

ಥಳಿಥಳಿಸುವ ವೃಂದಾವನದಿ, ತಾನು ।
ಕುಳಿತು ಭಕ್ತರಿಗೀವ ವರವನು ತ್ವರದಿ॥
ನಳಿನನಾಭನ ಕೃಪಾಬಲದಿ ಇದೆ।
ನಳಿನಜಾಂಡದಿ ಸರಿಗಾಣೆ ಮಹಿಮಾದಿ ॥ 1 ॥

ಪೊಳೆವೊ ವಕ್ಷಸ್ಥಳದವನ ಎಳೆ।
ತುಲಸಿಮಾಲಾಂಕಿತಕಂಧರಯುತನ ।
ನಳಿನಾಕ್ಷಮಾಲೆ ಶೋಭಿತನ ಉರ।
ಚಲುವದ್ವಾದಶಪುಂಡ್ರಮುದ್ರ ಚಿಹ್ನಿತನ ॥ 2 ॥

ಗುರುಜಗನ್ನಾಥವಿಠಲನ ಪಾದ–।
ಸರಸಿಜಯುಗಳಕಾರಡಿ ಎನಿಪನ।
ಪೊರೆವನು ತನ್ನ ಜನರನ್ನ ಎಂದು।
ಶಿರಸದಿ ನಮಿಸಿ ಬೇಡಿದೆ ಗುರುವರನ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

62. ವಂದಿಸುವೆ ಇಂದಿನ ಸುಂದರ ಗುರುರಾಜರ।

ವಂದಿಸುವೆ ಇಂದಿನ ಸುಂದರ ಗುರುರಾಜರ।
ಮಾನಂದ ಮತಾಂಬುಧಿ ಚಂದಿರ। ರಾಘವೇಂದ್ರರ ॥ ಪ ॥

ಭಾವ ಶುದ್ಧಿಯಿಂದಲಿವರ । ಭಜನೆ ಮಾಡುತಿಹರ ಜನರ ।
ಕಾವ ಕರುಣಿ ನಮ್ಮ ಯತಿವರ । ಗುರುವರ ॥ 1 ॥

ಚಂದ್ರಿಕ ಪರಿಮಳಾರ್ಯರ । ರಾಮಚಂದ್ರರನುಗ್ರಹ ಪಾತ್ರರ।
ಹಿಂದೆ ಕನಕ ಕಶ್ಯಪ ಜಾತರ । ವ್ಯಾಸರ ॥ 2॥

ಮರೆಯದಿವರ ಸ್ತೋತ್ರ ಪಠಿಸುವ । ನರಹರಿವಿಠಲ ಒಲಿಯುವ ।
ದುರಿತ ರಾಶಿಗಳ ತರಿಯುವ । ಸುಖಗರಿವ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

63. ರಾಘವೇಂದ್ರ ಪಾವನಕಾಯ ರಾಘವೇಂದ್ರ

ರಾಘವೇಂದ್ರ ಪಾವನಕಾಯ ರಾಘವೇಂದ್ರ ॥ ಪ ॥

ರಾಘವೇಂದ್ರ ದುರಿತೌಘ ಪರಿಹರಿಸಿ ।
ರಾಘವೇಶನ ಪಾದ ಮೌಘನುತಿಪ ಗುರು ॥ ಅ ॥

ಶರಣು ಹೊಕ್ಕೆನು ಇಂದು ಕಿರುಣ ಪೋಲುವ ಚರಣ ।
ಸ್ಮರಣೆ ಪಾಲಿಸುವುದು ಕರುಣದಿಂದಲಿ ಇಂದು ॥ 1 ॥

ವ್ಯಾಕುಲ ಹರಿಸಿ ಕಾಮಕ್ರೋಧ ಓಡಿಸಿ ।
ಸಾಕುವುದು ಎನ್ನನೇಕ ಮಹಿಮ ಗುರು ॥ 2 ॥

ಸಿರಿವಿಜಯವಿಠ್ಠಲ ಪರದೈವವೆಂದು ।
ಸ್ಥಿರವಾಗಿ ಸ್ಥಾಪಿಸಿ ಮೆರೆದ ನಿರ್ಮಲಕಾಯ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

64. ತುಂಗಾತೀರ ವಿರಾಜಂ ಶ್ರೀಗುರು

ತುಂಗಾತೀರ ವಿರಾಜಂ ಶ್ರೀಗುರು
ರಾಘವೇಂದ್ರಯತಿರಾಜಂ ಭಜ ಮನ: ॥ ಪ ॥

ಮಂಗಳಕರ ಮಂತ್ರಾಲಯವಾಸಂ
ಶೃಂಗಾರಾನನ ವಿಲಸಿತಹಾಸಂ ॥ 1 ॥

ಕರಧೃತದಂಡಕಮಂಡಲುಮಾಲಂ
ಸುರುಚಿರಚೇಲಂ ಧೃತಮಣಿಮಾಲಂ ॥ 2 ॥

ನಿರುಪಮಸುಂದರಕಾಯಸುಶೀಲಂ
ವರಕಮಲೇಶಾರ್ಪಿತ ನಿಜಸಕಲಂ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

65. ಎಂಥಾ ದಯವಂತನೋ ಮಂತ್ರಮನಿನಾಥನೊ

ಎಂಥಾ ದಯವಂತನೋ ಮಂತ್ರಮನಿನಾಥನೊ ।
ಸಂತತದಿ ಎನ್ನನು ಚಿಂತಿಪರಿಗೆ ಸುರಧೇನು ॥ ಪ ॥

ವರಪ್ರಲ್ಹಾದನು । ಮರಳಿ ಬಾಲ್ಹೀಕನು ।
ಗುರುವ್ಯಾಸರಾಯನು । ಪರಿಮಳಾಚಾರ್ಯನು ॥ 1 ॥

ಇರುವ ತುಂಗಾತಟದಲ್ಲಿ । ಬರುವ ತಾನು ಕರೆದಲ್ಲಿ ।
ಕರವಪಿಡಿದು ಪೊರೆವಲ್ಲಿ । ಸರಿಗಾಣೆ ಧರೆಯಲ್ಲಿ ॥ 2 ॥

ಭೂಮಿಯೊಳು ಖ್ಯಾತನು ಶ್ಯಾಮಸುಂದರ ಪ್ರೀತನು ।
ಕಾಮಿತಾರ್ಥದಾತನು ಸ್ವಾಮಿ ನಮಗೆ ಈತನು ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

66. ನೀ ಪಾಲಿಸು ಗುರುರಾಯಾ ಎನ್ನ ಕಾಪಾಡು ಬಾ ಮಹರಾಯಾ

ನೀ ಪಾಲಿಸು ಗುರುರಾಯಾ ಎನ್ನ
ಕಾಪಾಡು ಬಾ ಮಹರಾಯಾ ॥ ಪ ॥
ಭೂಪತಿ ನೀ ಎನ್ನ ಆಪದ್ಬಾಂಧವ

ಶ್ರೀಪತಿ ಪದ ಪ್ರೀಯ ಈ ಪರಿ ಮಾಡದೆ ॥ ಅ ॥

ಪಾಪಿಗಳೊಳಗೆ ಹಿರಿಯನು ನಾನು ।
ನಿಷ್ಪಾಪಿಗಳರಸೆ ಗುರುರಾಯಾ ।
ಅಪಾರ ಜನುಮದಿ ಬಂದೆನೋ ಈಗ ।
ತಾಪತ್ರಯಗಳ ಕಳೆ ಮಹರಾಯಾ ॥ 1 ॥

ನೀಚರ ಒಳಗೆ ನೀಚನು ಪಾಪ
ಮೋಚನೆ ಮಾಡೋ ಗುರುರಾಯಾ ।
ಯೋಚನೆ ಇಲ್ಲದೆ ಅನ್ಯರ ಅನುದಿನ ।
ಯಾಚಿಸಿ ಕೆಟ್ಟೆನೊ ಮಹಾರಾಯಾ ॥ 2 ॥

ದಾತನೆ ನಿನ್ನಯ ಪೋತನು ನಾನಯ್ಯ ।
ಈ ತೆರ ಮಾಳ್ಪರೆ ಗುರುರಾಯಾ
ದಾತಗುರುಜಗನ್ನಾಥವಿಠ್ಠಲಪದ ।
ದೂತನೂ ನೀನೇ ಮಹಾರಾಯಾ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

67. ನೋಡಲೆ ಮನವೆ ಕೊಂಡಾಡು ಗುರುಗಳ ಪಾದ ।

ನೋಡಲೆ ಮನವೆ ಕೊಂಡಾಡು ಗುರುಗಳ ಪಾದ ।
ಈಡಿಲ್ಲವೋ ಪುಣ್ಯಕೆ ॥ ಪ ॥
ನಾಡೊಳಗೆ ಗುರುರಾಘವೇಂದ್ರರಾಯರ ಸೇವೆ ।
ಮಾಡಿದವ ಪರಮ ಧನ್ಯಮಾನ್ಯ ॥ ಅ ॥

ನಿಷ್ಠೆಯಿಂದಲಿ ಭಜಿಸೆ ಕಷ್ಟಗಳ ದೂರ ।
ಮನೋಭೀಷ್ಟೆಯನು ಪೂರೈಪರೋ ।
ಅಷ್ಟ ಸೌಭಾಗ್ಯವನು ಕೊಟ್ಟು ಸುಜನರಿಗೆ
ಶ್ರೀ ವಿಷ್ಣು ದಾಸ್ಯವ ತೋರ್ಪರೋ ।
ದೃಷ್ಟಿಯಿಂದಲಿ ನೋಡೆ ಅನೇಕ ಜನ್ಮದ
ಪಾಪ ಬಿಟ್ಟು ಪೋಪವು ಕ್ಷಣದೊಳು ।
ಎಷ್ಟು ಪೇಳಲಿ ಇವರ ನಿಷ್ಠ ಮಹಾತ್ಮೆಯನು
ದುಷ್ಟರಿಗೆ ದೊರೆಯದಿವರಾ ಸೇವಾ ॥ 1 ॥

ಹಲವು ತೀರ್ಥಗಳ್ಯಾಕೆ ಹಲವು ಕ್ಷೇತ್ರಗಳ್ಯಾಕೆ ।
ಫಲ ಸುಲಭದಲ್ಲಿರಲು । ಬಲವು ಇದ್ದದರಲಿ
ಪ್ರದಕ್ಷಿಣೆ ಸುಪದ ಜಲ ತಲೆಯಲ್ಲಿ ಧರಿಸಿರೋ ನಿತ್ಯ ।
ಮಲರಹಿತನಾಗಿ ದಂಡ ಪ್ರಣಾಮವು ಮಾಡೆ
ಒಲಿವ ಕರುಣದಲಿ ಬೇಗ । ಜಲಜ ನಾಭನು
ನಾಲ್ಕು ರೂಪದಿಂದಿವರಲ್ಲಿ ಸಿಲುಕಿ
ಪೂಜೆಯಗೊಂಬ ಸತತ ಮೋಕ್ಷದಾತಾ ॥ 2 ॥

ಹರಿದಾಸರಿದ್ದ ಸ್ಥಳ ವರಕಾಶಿ
ಮೊದಲಾದ ಕುರುಕ್ಷೇತ್ರಕ್ಕಿಂತಧಿಕವೋ ।
ಸುರಋಷಿ ಮುನಿಗಳಿಲ್ಲಿರುತಿಹರು ವೈಕುಂಠ
ಸರಿಮಿಗಿಲು ಎಂದೆನಿಪುದು ।
ಪರಮ ಸುಜ್ಞಾನಿಗಳಿಗೀಫಲವು ದೊರಕುವದು ।
ತಾರತಮ್ಯದಿ ಇತರ ಜನಕೆ ಗುರು ಶ್ರೀಶವಿಠ್ಠಲನು
ಇವರ ರೂಪನಾಮದಲಿ ಪರಿಪರಿಯ ವರವಗರೆವ ಪೊರೆವ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

68. ಸುರಪನಾಲಯದಂತೆ ಮಂತ್ರಾಲಯ

ಸುರಪನಾಲಯದಂತೆ ಮಂತ್ರಾಲಯ ।
ಕರೆಸುವುದು ಕಂಗೊಳಿಸುವುದು ನೋಳ್ಪಜನಕೆ ॥ ಪ ॥

ಕಾಮಧೇನುವಿನಂತೆ ಇಪ್ಪ ಗುರುವರ
ಸಾರ್ವಭೌಮ ಸುಧೀಂದ್ರಸುತ ಶ್ರೀರಾಘವೇಂದ್ರ ।
ಆಮಯಾದಿ ಖಳತಮಿಸ್ರ ಓಡಿಸುವ
ಚಿಂತಾಮಣಿಪ್ರಕಾಶದಂತಿಪ್ಪ ವೃಂದಾವನದಿ ॥ 1 ॥

ಸುರತರುವಿನಂತಿಪ್ಪ ಕೀರ್ತಿಸಚ್ಛಾಯ
ಆಶ್ರಿತರ ಮನೋರಥ ಪೂರೈಸುವ ।
ಧರಣಿ ಸುರಾಖ್ಯ ಷಟ್ಪದಗಳಿಗೆ ತತ್ಸುಧಾ
ಪರಿಮಳದಿ ತೃಪ್ತಿಪಡಿಸುವ ಮರುತನಂತೆ ॥ 2 ॥

ವಾರಾಹಿಯೆಂಬ ನಂದನವನದಿ ಜನರು
ವಿಹಾರಮಾಳ್ಪರು ಸ್ನಾನಪಾನದಿಂದ ।
ಗುರುರಾಘವೇಂದ್ರರಲ್ಲಿಪ್ಪ ಕಾರಣ
ಪರಮ ಕಾರುಣ್ಯನಿಧಿ ಜಗನ್ನಾಥವಿಠಲನಿಹನು ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

69. ನೋಡಿದೆ ಗುರುಗಳ ನೋಡಿದೆ

ನೋಡಿದೆ ಗುರುಗಳ ನೋಡಿದೆ ॥ ಪ ॥

ನೋಡಿದೆನು ಗುರು ರಾಘವೇಂದ್ರರ ।
ಮಾಡಿದೆನು ಭಕುತಿಯಲಿ ವಂದನೆ ।
ಬೇಡಿದೆನೊ ಕೊಂಡಾಡಿ ವರಗಳ ।
ಈಡು ಇಲ್ಲದೆ ಮೆರೆದ ಮಹಿಮರ ॥ ಅ.ಪ. ॥

ಅಲವಬೋಧ ಮಿಕ್ಕಾದ ಮುನಿಗಳು
ಸಾಂಶರು ಒಂದು ರೂಪದಿ । ನೆಲೆಯಗಿ
ನಿತ್ಯದಲಿ ಇಪ್ಪರು ಒಲಿಸಿಕೊಳುತಲಿ ಹರಿಯ ಗುಣಗಳ ।
ತಿಳಿಸಿ ತಿಳಿವರು ತಮ ತಮಗಿಂದಧಿಕರಲಿ ಉಪದೇಶಮಾರ್ಗದಿ ।
ಕಲಿಯುಗದೊಳಗಿದೇ ಕೇವಲ ಕತ್ತಲೆಯ
ಪರಿಸುವ ಸೊಬಗು ಸಂತತ ॥ 1 ॥

ರಾಮ ನರಹರಿ ಕೃಷ್ಣ ಕೃಷ್ಣರ ।
ನೇಮದಿಂದೀ ಮೂರ್ತಿಗಳ ಪದ ।
ತಾಮರಸ ಭಜನೆಯನು ಮಾಡುವ ।
ಕೋಮಲಾಂಗನು ಕಠಿಣಪರವಾದಿ ।
ಸ್ತೋಮಗಳ ಮಹಮಸ್ತಿಕಾದ್ರಿಗೆ ।
ಭುವಿಯೊಳು ಪವಿಯೆನಿಸಿದ ಯತಿ ।
ಯಾಮಯಾಮಕೆ ಗುರುಗಳ ಎಲ್ಲರಿಗೆ ಶುಭ ।
ಕಾಮಿತಾರ್ಥವ ಕರೆವ ॥ 2 ॥

ಮಿತವೆ ಎನದಿರಿ ಎಲ್ಲಿ ದಿನ ದಿನಕತಿಶಯವೆ
ಆಗುವುದು । ಭೂಸುರರತತಿಗೆ ಭೋಜನ
ಕಥಾಶ್ರವಣ ಭಾರತ ಪುರಾಣಗಳಿಂದಲೊಪ್ಪುವ ।
ಕ್ಷಿತಿಯೊಳಗೆ ಮಂತ್ರಾಲಯ ಗ್ರಾಮಕೆ ಪ್ರತಿ
ಇಲ್ಲವೆಂದೆನಿಸಿ ಕೊಂಬೋದು ।
ಪತಿತಪಾವನ ವಿಜಯವಿಠಲನ ।
ತುತಿಸಿಕೊಳುತಲಿ ಮೆರೆವ ಮುನಿಗಳ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

70. ನಮಿಸಿ ಬೇಡುವೆ ವರಗಳ ನಿನ್ನ

ನಮಿಸಿ ಬೇಡುವೆ ವರಗಳ ನಿನ್ನ ।
ಸಂಯಮಿಕುಲೋತ್ತಮ ರಾಘವೇಂದ್ರರನ್ನ ॥ ಪ ॥

ವಿಮಲಸುಮತಿ ಜನರತಿ ಪ್ರೀಯ ।
ಪಾದ ಕಮಲಗಳಿಗೆರಗುವೆನೊ ಜೀಯಾ ।
ಶಮಲ ಮಾರ್ಗದಲಿ ಮತಿಯ ನೀಡದಿರೋ ।
ಅಮಲಕರುಣದಿ ಪಿಡಿಯೋ ಕೈಯಾ ॥ 1 ॥

ಕಂಡ ಕಂಡವರ ಬೇಡಿ ಬೇಡಿ ನೊಂದೆ ।
ಸುಕಮಂಡಲದಂಡಧಾರಿ ನೀ ಗತಿ ಎಂದೆ ।
ಪಂಡಿತಾಗ್ರಗಣ್ಯ ಇನ್ನಾದರೂ ಮುಂದೆ ।
ಕೋದಂಡಪಾಣಿಪಾದವ ತೋರಿಸೋ ತಂದೆ ॥ 2 ॥

ಶ್ರೀಸುಧೀಂದ್ರ ಯತಿಕರಕಂಜ ಸಂಜಾತ ।
ತುಂಗಾಸುನದಿನಿಲಯಾಘಾಂಬುಧಿ ಪೋತಾ ।
ವಾಸುಕಿಶಯನ ಗುರುಜಗನ್ನಾಥವಿಠಲ ।
ದಾಸರಪೋಷಕ ಲಾಲಿಸೆನ್ನ ಮಾತಾ–ರಾಯಾ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

71. ಗುರುರಾಜ ಗುರುಸಾರ್ವಭೌಮ

ಗುರುರಾಜ ಗುರುಸಾರ್ವಭೌಮ ॥ ಪ ॥

ಗುರುರಾಜ ಗುರುಸಾರ್ವಭೌಮ ನಿನ್ನಯ ಪಾದ

ಸರಸಿಜಯುಗಕಭಿನಮಿಸುವೆ ॥ ಅ.ಪ. ॥

ಕರುಣಾಸಾಗರನೆಂದು ಚರಣವ ನಂಬಿದೆ

ಶರಣನ ಪಾಲಿಸು ಕರುಣಿಯೇ ॥ 1 ॥

ಅನ್ಯರಭಜಿಸದೆ ನಿನ್ನನ್ನೇ ಭಜಿಸುವೆ ।
ಎನ್ನ ಮರೆವೊದಿದು ನ್ಯಾಯವೇ ॥ 2 ॥

ನಾಥನು ನೀನಲ್ಲೆ ದೂತನು ನಾನಲ್ಲೆ ।
ಯಾತಕೆ ಈತೆರ ಮಾಡಿದಿ ॥ 3 ॥
ಎಲ್ಲೆಲ್ಲಿ ನಾಪೋದರಲ್ಲಲ್ಲೇ ನೀ ಬಂದು ।
ಎಲ್ಲ ಕಾರ್ಯಗಳನ್ನು ಮಾಡುವಿ ॥ 4 ॥

ಜ್ಞಾನಿಗಳರಸನೆ ಮೌನಿಶಿರೋಮಣಿ ।
ಧ್ಯಾನವ ಸಂತತ ನೀಡಯ್ಯ ॥ 5 ॥

ನಿನ್ನಲ್ಲಿ ಹರಿದಯ ಉನ್ನತ ಇರಲಿನ್ನು।
ಎನ್ನಲ್ಲಿ ನಿನ್ನ ದಯವಿರಲಯ್ಯ ॥ 6 ॥

ದಾತಗುರುಜಗನ್ನಾಥವಿಠಲ ನಿನ್ನ ।
ಮಾತುಲಾಲಿಸಿದಂತೆ ಪೊರೆ ಎನ್ನ ॥ 7 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

72. ರಾಘವೇಂದ್ರ ಗುರು ನಮೋ ನಮೋ।

ರಾಘವೇಂದ್ರ ಗುರು ನಮೋ ನಮೋ।
ಯೋಗಿಜನೇಡಿತ ನಮೋ ನಮೋ॥

ದುಷ್ಟಮುಖಾಯ ನಮೋ ನಮೋ।
ಶಿಷ್ಟರು ಸೇವಿಸೆ ನಮೋ ನಮೋ।
ದೃಷ್ಟಿಲಿ ಕಳೆಯುವಿ ನಮೋ ನಮೋ
ಸ–ರ್ವೇ–ಷ್ಟವರಪ್ರದ ನಮೋ ನಮೋ ॥ 1 ॥

ನಾಲ್ಕವತಾರನೆ ನಮೋ ನಮೋ।
ಲೋಕನಾಥಾಶ್ರಯ ನಮೋ ನಮೋ।
ಕಾಕುದುರ್ಮ–ತಹರ ನಮೋ ನಮೋ।
ಶ್ರೀಕರಸೇವಕ ನಮೋ ನಮೋ ॥ 2 ॥

ವೃಂದಾವನದಲಿ ನಮೋ ನಮೋ ಭಕ್ತ–
ವೃಂದದಲಿಂದು ನಮೋ ನಮೋ ॥
ಬಂದು ಮಾತಾಡುವಿ ನಮೋ ನಮೋ।
ಂದಿರೇಶನಪ್ರಿಯ ನಮೋ ನಮೋ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

73. ಗುರುರಾಜ ಗುರುರಾಜ

ಗುರುರಾಜ ಗುರುರಾಜ
ಧರಣಿಸುರರ ನಮಿಪ ಸುರಭೂಜ ॥ ಅ.ಪ. ॥

ಜ್ಞಾನಿಗಳರಸನೆ ಧ್ಯಾನಿಪ ಜನರಿಗೆ। ಜ್ಞಾನವು
ಪಾಲಿಸೋ ಜ್ಞಾನಿಜನನಾಥ ॥ 1 ॥

ನೀಚರಮನೆಯಲಿ ಯಾಚಿಪಗೋಸುಗ।
ಯೋಚಿಪ ಮನವನು ಮೋಚನೆ ಮಾಡೈ ॥ 2 ॥

ಯಾತರೆ ಭವದಲಿ ಈತೆರ ಬಳಲಿಪಿ।
ದಾತನೆಗುರುಜಗನ್ನಾಥವಿಠಲ ದೂತ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

74. ಯಾತರ ಭಯ ಯತಿನಾಥನ ಪದಯುಗ ಪ್ರೀತಿಲಿ ಭಜಿಪನಿಗೆ

ಯಾತರ ಭಯ ಯತಿನಾಥನ ಪದಯುಗ ಪ್ರೀತಿಲಿ ಭಜಿಪನಿಗೆ ॥ ಪ ॥

ಪೋತರು ಸತಿ ಮಹಭೂತಿಯ ನೃಪತನ
ನಾಥನಿಗರ್ಪ–ಸಿ ದೂತ ನಾನೆಂಬುವಗೆ ॥ ಅ.ಪ ॥

ವಂದಿಸಿ ಧನವನು ತಂದು ಜನರು ತನ್ನ ಮುಂದೆ ಸುರಿಯಲೇನು।
ವಂದನೆ ಮಾಡದೆ ನಿಂದಿಸಲೇನದರಿಂದ ಪೋದದೇನು।
ಬಂದ ಬಂದ ಜನರಾನಂದಂದಿ
ತನ್ನನು ಪೊದಿ ನಡೆಯಲೇನು
ಸುಂದರ ಗುರುಪದ ಮಂದಜಯುಗ ಮನೊ
ಮಂದಿರದಲಿ ತಾ ತಂದು ಭಜಿಪನಿಗೆ ॥ 1 ॥

ಉದಯದಲಮರನದಿಯಲಿ ಸ್ನಾನಕೆ ಒದಗದೆ ಮಲಗಿರಲೇನು ।
ಮದನ ಕೇಳಿಯೊಳು ಸುದತಿಯ ಸಹಿತದಿ ಮುದದಲಿ ಕುಳಿರಲೇನು ।
ಕದನದ ವಾರ್ತೆಯ ವದನದಲ್ಯಾಡುತ ಮದಕವ ಮಾಡಿದರೇನು।
ಸದಮಲ ಗುರುಪದ ಪದುಮವ ತನ್ನಯ,
ಹೃದಯದೊಳಗೆ ಬಲು ಮುದದಿ ಭಜಿಪನಿಗೆ ॥ 2 ॥

ಅನ್ಯರ ಮನೆಯಲಿ ಮನ್ನಣೆ ದಿನ ದಿನ, ಘನ್ನವಾಗಿ ಮಾಡಿದರೇನು ।
ಭಿನ್ನಮನದಿ ಪರರನ್ಯಥ ಕಾರ್ಯವ ಬೆನ್ನು ಬಿಡದೆ ಮಾಡಿದರೇನು ।
ತನ್ನಯ ಸತಿಸುತ ಮನ್ನಿಸದನುದಿನ, ಘನ್ನತೆ ಕಳೆದಿರಲೇನು।
ಘನ್ನ ಗುರುಜಗನ್ನಾಥವಿಠಲನ್ನ
ಮನದಿ ಭಜಿಸಿ ಪಾವನ್ನನೆನಿಸುವ (ನಿಯಾತರ ಭಯ) ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

75. ತಪ್ಪುಗಳೆಣಿಸಾದೆನ್ನಪ್ಪ ಕಾಯಲಿಬೇಕು ಸರ್ಪಶಯನನ ದೂತಾ

ತಪ್ಪುಗಳೆಣಿಸಾದೆನ್ನಪ್ಪ ಕಾಯಲಿಬೇಕು
ಸರ್ಪಶಯನನ ದೂತಾ ॥ ಪ ॥

ಇಪ್ಪತ್ತು ಒಂದು ಕುಭಾಷ್ಯ ಮುರಿದರಾ ಮ-
ತ ಪ್ರವರ್ತಕ ರಾಘವೇಂದ್ರ ಮುನಿಪ ಮಹಾ ॥ ಅ.ಪ ॥

ಪ್ರತಿ ವರುಷಕೆ ಬಂದು ನುತಿಸಿ ಪೋಗು ಎಂದೆ-
ನುತ ಸ್ವಪ್ನದಲಿ ನೀ ಬಂದೂ।
ಹಿತದಿಂದ ಪೇಳಲು ರತನಾಗಿ ಧನದಿ ಮ-
ರತು ಬಿಟ್ಟೆ ನಿಮ್ಮನು ಯತಿಕುಲೋತ್ತಮ ಇಂಥಾ ॥ 1 ॥

ಸ್ನಾನ ಸಂಧ್ಯಾನ ಸುಜಪತಪ ವ್ರತಹೋಮ
ಮೌನಮಾರ್ಗಗಳರಿಯೆ ।

ಜ್ಞಾನಿಗಳಾನುಸಂಧಾನ ಪೂರ್ವಕ ಪೂಜೆ–
ಯಾನು ಮಾಡದೆ ದುಷ್ಟ ಮಾನವರೊಳಗಿದ್ದ ॥ 2 ॥

ಏಸು ಜನ್ಮದಿ ಬಂದ ದೋಷವ ಕಳೆದು ವಿ–
ಶೇಷ ಸುಖವಕೊಡುವಾ।
ಈ ಸುವಾರ್ತೆಯ ಕೇಳಿ ಮೊರೆಹೊಕ್ಕೆ ಗುರುಪ್ರಾ–
ಣೇಶವಿಠಲನ ದೂತಾ ಮತ್ಪ್ರೀತಾ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

76. ಶರಣಜನರ ಕಲ್ಪತರುವೆ ನಿನ್ನ। ಕರುಣದಿ ಪೊರೆ ಎನ್ನ ಗುರುವೆ

ಶರಣಜನರ ಕಲ್ಪತರುವೆ ನಿನ್ನ। ಕರುಣದಿ ಪೊರೆ ಎನ್ನ ಗುರುವೆ ॥ ಪ॥

ಶರಣರಿಲ್ಲದೆ ಕರುಣಿಸೆಂದು । ಶರಣುಪೊಕ್ಕೆನೊ ಚರಣಕಮಲಕೆ ।
ಶರಣನೆಂದೂ ಕರುಣದಿಂದಲಿ।ಕರುಣಿಸೆನ್ನನು ಕರುಣಸಾಗರ ॥ಅ.ಪ.॥

ತಾಪತ್ರಯದಿ ಬಹು ಬೆಂದೆ ಭವ–।ಕೂಪಾರದೊಳಗತಿ ನೊಂದೆ ।
ಪಾಪಮೋಚಕ ನಿಷ್ಪಾಪಜನರ ಪಾಲ ।
ಕಾಪಾಡೋ ನೀಎನ್ನ ಅಪಾರಮಹಿಮನೇ।
ದ್ವಾಪರದಿ ಯದುವರನು ಸಾಂ–। ದೀಪಪುತ್ರನ ತೋರಿ ಕಾಯ್ವನು।
ಭೂಪ ಭಕನಳಿದು ಸಲಹಿದ–।ನಾಪರಿಯಲಿ ಎನ್ನ ಸಲಹೋ ॥ 1 ॥

ಕಾಮಿತಫಲದ ನೀನೆಂದು ಬಲು–ಪ್ರೇಮಾದಿ ಬಳಿಗೆ ನಾ ಬಂದು ।
ಸ್ವಾಮಿ ಗುರುಸಾರ್ವಭೌಮ ನಿನ್ನಂಘ್ರಿಯುಗ–।
ತಾಮರಸವ ಮನೋಧಾಮದಿ ನಿಲಿಸೆಂದೆ।
ರಾಮ ಕೌಶಿಕಮುಖವ ಕಾಯ್ವನು । ಭೀಮ ವಿಪ್ರರ ಭಿತಿಬಿಡಿಸಿದ ।
ಧೂಮಕೇತನನುಂಡು ಕೃಷ್ಣನು। ಆ ಮಹದ್ಭಯ ಕಳೆದ ತೆರದಲಿ ॥ 2 ॥

ತಾತ ನಿನ್ನು ಬಾಧೆಬಡಿಸೆ ಶಿರಿ–। ನಾಥ ತಾ ಬಂದಾಗ ಬಿಡಿಸೆ ।
ದಾತಗುರುಜಗನ್ನಾಥವಿಠಲನತಿ–। ಪ್ರೀತಿಯಿಂದಲಿ ನಿನ್ನ
ಮಾತು ಕೇಳಿದ ತೆರ । ಮಾತು ಲಾಲಿಸಿ ಕಾಯೊ ಯತಿಕುಲ –।
ನಾಥ ಎನ್ನಪರಾಧ ನೋಡದೆ ।
ಭೀತಿಯನು ಸದೆದು ಪಾಲಿಸ–। ನಾಥರಕ್ಷಕನಲ್ಲೆ ಗುರುವರ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

77. ಇದನೆ ಪಾಲಿಸೊ ಗುರುವೇ ರಾಘವೇಂದ್ರ ಇದನೆ ಪಾಲಿಸೊ ಗುರುವೇ

ಇದನೆ ಪಾಲಿಸೊ ಗುರುವೇ ರಾಘವೇಂದ್ರ
ಇದನೆ ಪಾಲಿಸೊ ಗುರುವೇ ॥ ಪ ॥

ಇದನೆ ಪಾಲಿಸು ಎನಗೆ ಪದುಮನಾಭನ ಪ್ರಿಯ
ವದನದೊಳು ತವನಾಮ ನಿರುತದಿ ಇರಲೆಂದು ॥ ಅ.ಪ. ॥

ಭುವಿಯೊಳು ಕೇವಲ ಮನದೊಳು
ವಿಷಯ ಮಾರ್ಗದಿ ಇರುವೆ ।
ಪವನಮತದಿ ಶ್ರೀರಾಘವೇಂದ್ರ ಗುರು,
ಪಾವನ್ನ ಮಾಡೆನ್ನ ಪವಮಾನಾವೇಶನೇ ॥ 1 ॥

ಗತಿ ನೀನು ಎಂದು ಬಂದೆನು ತುತಿಪೆ ನಿನ್ನನು ನಾನು।
ಸತತದಿ ಕರುಣದಿ ತವ ಜನ ಗಿರಿಸಿ,
ಲೋಕದೊಳಗೆ ಹರಿದಾಸ್ಯವ ಕೊಟ್ಟು ನೀ ॥ 2 ॥

ಅನ್ಯ ಕುಕರ್ಮಗಳನು ಮಾಡಿ
ನಾನು ಬಳಲುತ ನೊಂದೆನಯ್ಯ ।
ಘನ್ನ ಮಹಿಮ ಚೆನ್ನ ಶ್ರೀಕರವಿಠಲನ
ಇನ್ನಾದರೂ ತೋರೊ ಹೃದಯಮಂದಿರಲ್ಲಿ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

78. ಶ್ರೀಸುಧೀಂದ್ರತನಯ ನಿನ್ನ ದಾಸ ಜನರೊಳಾಡಿಸೆನ್ನ ।

ಶ್ರೀಸುಧೀಂದ್ರತನಯ ನಿನ್ನ ದಾಸ ಜನರೊಳಾಡಿಸೆನ್ನ ।
ದೋಷ ಕಳೆದು ಕಾಯೊ ಘನ್ನ
ವಾಸುದೇವನೊಲಿದ ಧನ್ಯ ॥ ಪ ॥

ಏಸು ಜನುಮ ಭಾಗ್ಯ ನಿನ್ನ ಈಸು ಸೇವೆಗೆಳೆಸಿತೆನ್ನ।
ವಾಸವಾಗಿ ಮನದೊಳಿನ್ನು ಲೇಸುಗೊಳಿಸು ದಿನಗಳಿನ್ನು ॥ 1 ॥

ಮುನ್ನ ಗೈದ ನಿನ್ನ ಪಾಪ ಇನ್ನು ತೀರಿತೆನ್ನಬೇಡ
ಪುಣ್ಯರಾಶಿ ನಿನ್ನ ಎಡೆಯೊಳನ್ಯಗತಿಯೆ ಘನ್ನ ಮಹಿಮೆ ॥ 2 ॥

ಆಗ ಈಗ ಎನ್ನಬೇಡ ಯೋಗಿ ಚಂದ್ರ ರಾಘವೇಂದ್ರ।
ಬೇಗ ವಿಠಲೇಶನೊಲುಮೆಯೋಗ ಭಕುತಿ ಭಾಗ್ಯ ತೋರೊ ॥ 3 ॥
ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

79. ಕರುಣಿಸಿ ಪಿಡಿಯೋ ಕೈಯಾ ಗುರು ರಾಘವೇಂದ್ರರಾಯಾ

ಕರುಣಿಸಿ ಪಿಡಿಯೋ ಕೈಯಾ ಗುರು ರಾಘವೇಂದ್ರರಾಯಾ ॥ ಪ ॥

ನಾ ಮಾಡಿದಪರಾಧ ನೀ ಮಾತ್ರ ಕ್ಷಮಿಸು ಬಿಡದೆ ।
ನಾ ಮನದಿ ಬೇಡಿಕೊಂಬೆ ಹೇ ಮಂತ್ರಮುನಿಯೇ ಧೊರೆಯೇ ॥ 1 ॥

ನಿನ್ನೊರತು ಪೊರೆವರನ್ನು ಇನ್ನಾರು ಕಾಣೆ ಜಗದಿ।
ಮನ್ನಿಸಿ ಪೊರೆವ ದಾತ ಎನ್ನಾಣೆ ಮುನಿವರ್ಯ ॥ 2 ॥

ವಟುವೇಷಧಾರಿ ನೀನೇ ಶ್ರೀಕರವಿಠಲ ಪರನೇ ।
ಧಿಟನೆದು ಸಾರಿದಂಥ ವಿಠಲಾರ್ಯಗೊಲಿದ ಮೌನಿ ॥ 3 ॥
ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

80. ರಾಯರೇ ಗತಿಯು ನಮಗೆ

ರಾಯರೇ ಗತಿಯು ನಮಗೆ
ವಾಯುಸುಮತೋದ್ಧಾರ ರಾಘವೇಂದ್ರಗುರು ॥ ಪ ॥

ಶೂಕಪಿಕಮೊದಲಾದ ವಿಕುಲಕ್ಕೆ ಮಧುರಫಲ।
ಯುಕುತಮಾಗಿಹ ಚೂತಸುಕುಜ ಗತಿಯು।
ಮುಕುತಿಗೆ ಸ್ಮಜ್ಞಾನ ಭಕುತಿ ವಿರಕುತಿ ಗತಿಯು।
ಅಕಳಂಕ ಶ್ರೀಮಂತ್ರಮಂದಿರದಿ ನೆಲೆಸಿಪ್ಪ ॥ 1 ॥

ಋಷಿಗಳಿಗೆ ಪ್ರಣವೇ ಗತಿ ಝಷಗಳಿಗೆ ಜಲವೇ ಗತಿ ।
ಸಸಿಗಳಭಿವೃದ್ಧಿಗೆ ಶಶಿರವಿ ಗತಿಯೋ ।
ಶೀಶುಗಳಿಗೆ ಜನನಿ ಗತಿ ಪಶುಗಳಿಗೆ ತೃಣವೆ ಗತಿ।
ಅಸಮಮಹಿಮೆಯಲಿ ಮೆರೆವ ಮಿಸುನಿಶಚ್ಯುಜರಾದ ॥ 2 ॥

ಕಾಮಿನಿವ್ಮಣಿಯರಿಗೆ ಕೈಪಿಡಿದ ಕಾಂತಗತಿ।
ಭೂಮಿಬುಧರಿಗೆ ಮಧ್ವಶಾಸ್ತ್ರ ಗತಿಯೊ।
ತಾಮರಸಸಖಸುತನ ಭಯಪೋಪುದಕೆ
ಶ್ಯಾಮಸುಂದರವಿಠಲಸ್ವಾಮಿ ನಾಮವೇ ಗ್ಪತಿಯೊ ॥ 3 ॥
ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

81. ಗುರುಗಳ ದರುಶನವಾಯಿತು ಎನಗೆ ಇನ್ನೇನಿನ್ನೇನು

ಗುರುಗಳ ದರುಶನವಾಯಿತು ಎನಗೆ ಇನ್ನೇನಿನ್ನೇನು ।
ಪರಮಾನುಗ್ರಹ ಮಾಡಿದರೆನಗೆ ಇನ್ನೇನಿನ್ನೇನು। ॥ ಪ ॥

ಗಂಗೋದಕಪಾದೋದಕ ಸಿಕ್ಕಿತು ಇನ್ನೇನಿನ್ನೇನು।
ಮಂಗಳಮಹಿಮ ಪ್ರಸಾದವು ಸಿಕ್ಕಿತು ಇನ್ನೇನಿನ್ನೇನು ॥ 1 ॥

ಭಂಟನಾಗಿ ಬಂದು ಸೇವೆಯ ಮಾಡಿದೆ ಇನ್ನೇನಿನ್ನೇನು
ತುಂಟತನವು ಇಚಿದು ಪೋಗಿತು ಎನಗೆ ॥ 2 ॥

ಘನ್ನ ಶ್ರೀಕರದಾಸನ ಕಂಡೆ ಇನ್ನೇನಿನ್ನೇನು ।
ಜಾನಕಿರಮಣನ ಪೂಜಿಪ ಸ್ಮರಿಸಿದೆ ಇನ್ನೇನಿನ್ನೇನು ॥ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

82. ಎನಗೆ ಸಕಲವು ನೀನೆ ಗುರುರಾಘವೇಂದ್ರ।

ಎನಗೆ ಸಕಲವು ನೀನೆ ಗುರುರಾಘವೇಂದ್ರ।
ಮನಮುಟ್ಟಿ ಭಜಿಸುವೆನು ಕಾರುಣ್ಯಸಾಂದ್ರ ॥ ಪ ॥

ಸಿರಿಯು ಸಂಪದ ನೀನೆ ವರವು ಶಾಪವು ನೀನೆ।
ಪರಿಪರಿ ಭೋಗಗಳು ನಿರುತ ಬಾಹೋ।
ಪರರ ನಿಂದನೆ ಅವಮಾನ ನಿನ್ನದಯ್ಯ।
ಶಿರಬಾಗಿ ಪೇಳುವೆನು ಎಲ್ಲ ನಿನ್ನದಯ್ಯ ॥ 1 ॥

ಜಪತಪಂಗಳು ನಿನೆ ಉಪವಾಸವ್ರತ ನೀನೆ।
ಅಪರಿಮಿತ ಸುಖಯೋಗ ಎಲ್ಲ ನೀನೆ।
ಅಪಜಯ ವಿಜಯದ ಎಲ್ಲ ಭಾಗ್ಯವು ನೀನೆ।
ಅಪರಿಮಿತ ಮಹಿಮನೆ ಎಲ್ಲ ನಿನ್ನದು ಗುರುವೆ ॥ 2 ॥

ಏನಿತ್ತುದೇಯನಗೆ ಪರಮಭಾಗ್ಯವು ಎಂದೆ।
ಮಾನನಿಧಿ ನಿನನ್ಯ ಕಾರುಣ್ಯ ಬೇಕೆಂದೆ।
ಜ್ಞಾನನಿಧಿ ಗುರುಶಯಾಮಸುಂದರನ ನಿಜದಾಸ।
ಧಯಾನಕೊಡು ನಿನ್ನಯ ಪಾದದಲಿ ನಿರುತ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

83. ನಂಬಿದೆನು ಗುರುರಾಘವೇಂದ್ರ

ನಂಬಿದೆನು ಗುರುರಾಘವೇಂದ್ರ।
ಛಂದದಿಂದ ಕಾಯೋ ಸುಯಮೀಂದ್ರ ॥ ಪ ॥

ಪ್ರಥಮಪ್ರಹ್ಲಾದನಾಗಿ ದ್ವಿತೀಯಬಾಹ್ಲೀಕನಾಗಿ ।
ದಾತಾ ವ್ಯಾಸರಾಯನೆನಿಸಿ ದೂತರನು ಪೊರೆಯುತ ॥ 1 ॥

ಕರೆದರೆ ಬರುವಿ ಎಚಿದು ನೀನೆ ಗತಿ ಎಂದು ಬಂದು ।
ಜರೆಯಬೇಡ ರಾಘವೇಂದ್ರ ಮರೆಯಬೇಡ ಎಂದೆಂದಿಗೂ ॥ 2 ॥

ಶ್ರೀಕರವಿಠಲದೂತ ಎಂದಿಂದಿಗೂ ಪೊರೆದಾತ।
ನೂಕಿಬಿಟ್ಟರೆ ಎನ್ನ ಸಾಕುವರಾರೊ ಶ್ರೀರಾಘವೇಂದ್ರ. ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

84. ರಾಯರ ದಯ ಒಂದಿರಲು ಸಾಕು ಯಾತರಭಯ ಎಮಗೆ

ರಾಯರ ದಯ ಒಂದಿರಲು ಸಾಕು ಯಾತರಭಯ ಎಮಗೆ ॥ ಪ ॥

ದಾತ ಈತನೆಂಬ ಖ್ಯಾತಿ ಬಿರುದು ಪೊತ್ತ,
ಪ್ರೀತಿಯಿಂದ ತಾ ಪೋಷಿಸುವವರ ।
ಸೋತು ಬಂದವರ ಕರವಪಿಡಿದು ತಾ
ಮಿತಿ ಇಲ್ಲದೆ ವರಗಳ ಕೊಡುತಿಹರ ॥ 1 ॥

ಉದರಗಾಗಿ ನಾ ಮೋಸವಗೈಯುತ,ಪಾಪವು ಎನಗೆ ಸುತ್ತಲಿದೆ.।
ವೇದನೆ ಪಡುತಿಹೆ ದಾರಿಯ ತೋರದೆ
ಮೋದದಿ ಪಿಡಿದ ರಾಘವೇಂದ್ರ ಗುರು ॥ 2 ॥

ಪ್ರೇಮದಿ ಪೂಜಿಪ ಗುರುರಾಘವೇಂದ್ರನು
ಶ್ರೀಕರವಿಠಲನು ಧ್ಯಾನಿಸುವ ।
ಕಾಮಿನಿ ಸುತಧನಜ್ಞಾನಕೊಡುವನು
ಕಾಮಿತಫಲಗುರುರಾಘವೇಂದ್ರ ಯತಿ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

85. ಇದು ಏನು ಚರಿಯಾ। ಪರಿಮಳಾರ್ಯಾ

ಇದು ಏನು ಚರಿಯಾ। ಪರಿಮಳಾರ್ಯಾ ॥ ಪ ॥

ಇದು ಏನು ಚರಿಯಾ ಶ್ರೀರಾಘವೇಂದ್ರನೇ ಭವ,
ಸಾಗರದೊಳುಬಿದ್ದ ಜನರನು ರಕ್ಷಿಸುವಿ ॥ ಅ.ಪ ॥

ಹಿಂದೆ ಮಹಾರಾಜಾಧಿನೆನಿಸಿದೆ ನೀನ
ಇಂದು ವೃಂದಾವನದಿ ತಾಪಸವೇಷದಿ ॥ 1 ॥

ಬಾಲತ್ರಯದಲಿ ನೀನು ನರಹರಿಯ ಒಲಿಸಿದೆ ।
ಹೃತ್ಕಮಲದಲ್ಲಿ ಮೂರ್ತಿ ತೋರದೆ ಇದ್ದು ॥ 2 ॥

ವರದವಿಠಲ ಕರುಣೆ ಶರಣುಬಂದವರಿಗೆ ।
ಕರೆದು ಇಷ್ಟಾರ್ಥವನು ನಿರುತದಿ ಕೊಡುತಿಹುದು ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

86. ಎಷ್ಟೆಂತೆಂದ್ವರಣಿಸಲಿ ಗುರುರಾಜನೇ

ಎಷ್ಟೆಂತೆಂದ್ವರಣಿಸಲಿ ಗುರುರಾಜನೇ ॥ ಪ ॥

ಎಷ್ಟೆಂತೆಂದ್ವರಣಿಸ ಶ್ರೀಗುರುರಾಘವೇಂದ್ರ
ಕಷ್ಟಗಳ ಪರಿಹರಿಸಿ ಇಷ್ಟಾರ್ಥನೀಡುವರ ॥ ಅ.ಪ ॥

ದೀನದಿಂದಲಿ ಬಂದ ನರರಿಗೆ, ನೀನೆ ಗತಿಯು ಎಂದು ।
ಘನ್ನಮಹಿಮನೇ ಕರುಣವ ನೀ ಮಾಡಿ ।
ಹೀನಕರ್ಮದಿಂದ ದೂರಮಾಡಿಸುವಿಯೋ ॥ 1 ॥

ಅನುಪಮಸನ್ಮಹಿಮ ಮುನಿಕುಲ।
ಕ್ಷಣಕ್ಷಣದೊಳು ಮಹಿಮ॥
ಜ್ಞಾನಹೀನನಾಗಿ ನಾನಾಯೋನಿಯಚರಿಸಿ।
ಜ್ಞಾನವಿತ್ತು ಅನಘ ಪ್ರೇಮದಿ ಪೊರೆವರ ॥ 2 ॥

ಈತದಾತಾಯತಿಯೋ, ನಾಥನೋ ।
ವಾತಾತ್ಮಜನದೂತನೋ ॥
ವಿತತ ಮಹಿಮ ನಮ್ಮ ವರದವಿಠಲನ ।
ಆತುಮದೊಳು ತೋರಿರಕ್ಷಿಸಿ ಗುರುವರ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

87. ಗುರುರಾಯರಸೇವಿಸೋ ಹೇ ಮನುಜ

ಗುರುರಾಯರಸೇವಿಸೋ ಹೇ ಮನುಜ ॥ ಪ ॥

ಗುರುರಾಯರಸೇವೆ ತವಕದಿಂದಲಿ ಮಾಡೆ।
ದೂರ ಓಡುವವು ದುರ್ಮತಿದು:ಖಗಳೆಲ್ಲ ॥ ಪ ॥

ನಮಿಪರ ಕಾಮಧೇನು ಭಜಿಪರ ಸುರಧೇನು ।
ಚಿಂತಿಪಜನರ ಚಿಂತಾಮಣಿ ಗುರುಗಳ ॥ 1 ॥

ರೋಗರುಜಿನಗಳ ಭೀತಿಬಾಧೆಗಳ।
ಮೃತ್ತಿಕೆ ಧರಿಸಲು ಬಿಟ್ಟು ಓಡಿಪೋಗುವವು ॥ 2 ॥
ವರದವಿಠಲನಧ್ಯಾನ ಮೌನದಿಂದಲಿ।
ಬೃಂದಾವನದಲಿ ಮಾಡುತಿಹರ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

88. ರಾಯರ ಪಾಡು ಎಲೇ ಮನವೇ

ರಾಯರ ಪಾಡು ಎಲೇ ಮನವೇ-
ರಾಯರ ಪಾಡು ಎಲೇ ಮನವೇ ॥ ಪ ॥
ಕಲಿಯುಗವಿದು ಬಲು ಘೋರಯುಗವಯ್ಯ ।
ಮಲಿನವಾಗುವುದು ಮನಕಾಯ ।
ಸುಲಭದಲಿ ರಾಘವೇಂದ್ರರ ನೆನೆದರೆ।
ಕಲಿಯುಗಕೃತಯುಗವಾಗುವದಯ್ಯ ॥ 1 ॥

ಗುರುವೇ ತಾಯಿ ತಂದೆ। ಗುರುವೇ ಬಂಧು ಬಳಗ ।
ಗುರುವೇ ಗತಿಯೊ ಗುರುವೇ ಸ್ಥಿತಿಯೋ ॥
ಗುರುಗಳ ಕರುಣವೇ ದಾರಿದ್ರಭಂಜನ-
ಗುರುಗಳ ಪಾದವೇ ನೆನೆ ಮನವೇ ॥ 2 ॥

ತನುವು ತನ್ನದಲ್ಲ ತನುಸಂಬಂಧಿಗಳಿಲ್ಲ ।
ದಣಿದು ಮ್ಮರೆಯಬೇಡವೊ ಗುರುರಾಯರ ॥
ಜ್ಞಾನನಿಧಿ ನಮ್ಮ ಶ್ರೀಕರ ವಿಠಲನ್ನ
ದಾಸನ ಸ್ಮರಣೆಯ ಕ್ಷಣಬಿಡದಲೆ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

89. ಕರುಣದಿ ಕರ ಪಿಡಿಯೋ ಶ್ರೀರಾಘವೇಂದ್ರ

ಕರುಣದಿ ಕರ ಪಿಡಿಯೋ ಶ್ರೀರಾಘವೇಂದ್ರ ।
ಕರುಣದಿ ಕರ ಪಿಡಿಯೋ
ಕರುಣದಿ ಕರಪಿಡಿದು ದುರಿತದೂರವ ಸರಿಸಿ ।
ಹರಿಸರಿ ಎಂಬ ಮತಿ ಸ್ಥಿರವಾಗಿ ಇರಲೆಂದು ॥ ಅ.ಪ. ॥

ಮೊರೆಯಹೊಕ್ಕೆನು ನಾನು ತರುಳನು ಎಂದೆಂದೂ ।
ಜರಿದು ನೂಕುವರೇ ಪರಮಮಂಗಳಚುತಿ ॥ 1 ॥

ಹರಿದಾಸರೊಳು ಎನ್ನ ಇರಿಸಿ ರಕ್ಷಿಸಯ್ಯ ।
ಹರಿಕಥಾಶ್ರವಣದಿ ನಿರುತದಿ ಇರಲೆಂದು ॥ 2 ॥

ಮೋಹನ್ನವಿಠಲನ್ನ ನಿರುತದಿ ಸ್ಮರಿಸುವ।
ಪಾಹಿ ಎಂದು ಇಚಿದು ನಿಮ್ಮ ಪಾದಕೆ ಶರಣು ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

90. ಚಂದ್ರ ಗುಣಸಾಂದ್ರ ರಾಘವೇಂದ್ರ ।

ಚಂದ್ರ ಗುಣಸಾಂದ್ರ ರಾಘವೇಂದ್ರ । ॥ ಪ ।.

ಶ್ರೀಮೂಲರಾಮ ಪಾದಾಂಬುಜ ಭೃಂಗ ।
ಚೆಲುವ ಮರುತಮತದ ಶುಭನಿಧಿಯಸಂಗ ॥ 1 ॥

ಶ್ರೀಕರ ಹರಿಯ ನಿರಾಕರಿಸುವ ದುಷ್ಟ ।
ಭೀಕರ ಮಾಯ್ಗಳ ಮುಖಕಮಲಕೆ ಪೂರ್ಣ ॥ 2 ॥

ವರದಗೋಪಾಲವಿಠಲನ ವಾರುತೆಗೆ ।
ಹರುಷ ಬಡುವ ಹರಿ ಭಕುತ ಚಕೋರಗೆ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

91. ರಾಘವೇಂದ್ರ ರಾಘವೇಂದ್ರ ನೀನೇ ಗತಿ

ರಾಘವೇಂದ್ರ ರಾಘವೇಂದ್ರ ನೀನೇ ಗತಿ। ॥ ಪ ॥

ವೇಗದಿ ಎನ್ನ ಪಿಡಿಯೋ ನೀನೇ ಸ್ಥಿತಿ ॥ ಅ.ಪ.॥

ಹೀನಮನದಲ್ಲಿ ನಾನು ನಾನು ಇದೇ ಸ್ಥಿತಿ ।
ದೀನಮಾನವನಿಗೆ ನೀನೆ ಗತಿ ॥ 1 ॥

ಎನ್ನ ಚಿಂತೆ ಪರಿಹರಿಪ ನೀನೇ ಮತಿ ।
ಅನುಮಾನವಿಲ್ಲವೋ ನೀನೇ ಗತಿ ॥ 2 ॥

ಸಂಕಟ ಪರಿಹರಿಸೋ ನೀನೇ ಗತಿ ।
ವೆಂಕಟವಿಠಲದಾಸ ನೀನೇ ಸ್ಥಿತಿ ॥ ॥ 3 ।.

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

92. ಬಿಡುವೆನೇನಯ್ಯ ಗುರುವೇ ಬಿಡುವೆನೇನಯ್ಯ

ಬಿಡುವೆನೇನಯ್ಯ ಗುರುವೇ ಬಿಡುವೆನೇನಯ್ಯ ॥ ಪ ॥

ಬಿಡುವೆನೇನೊ ರಾಘವೇಂದ್ರ ಸಡಗರದಿಂದ ಬಂದೆ ನಾನು।
ಡಂಗುರ ಹೊಯ್ಸಿ ಬೃಂದಾವನದಿ ಜಪವ ಮಾಡಲು ಬಿಟ್ಟೆನೆನೆ ॥ ಅ.ಪ ॥

ಚಕ್ರವರ್ತಿ ಆದರೇನೊ ಚಕ್ರಪಾಣಿಯ ಕುಣಿಸಿದರೇನೊ।
ನಕ್ರಹರನ ತಂದು ಎಮಗೆ ಅಕ್ಕರೆಯಿಂದ ತೋರುವತನಕ ॥ 1 ॥

ಜಾಣಯತಿಯು ಆದರೇನೊ ಮೌನದಿಂದ ಇದ್ದರೇನೊ।
ಕೋಣನಂತೆ ತಿರುಗುವ ನಮಗೆ ಜ್ಞಾನಭಕ್ತಿ ಕೊಡುವೊ ತನಕ ॥ 2 ॥

ಶಾಪಾನುಗ್ರಹ ಶಕ್ತನು ನೀನು ಅಪರೋಕ್ಷೀಕೃತ ಶ್ರೀಶನು ನೀನು।
ಅಪೇಕ್ಷಿತವ ಕೊಟ್ಟು ಎಮಗೆ ಭೂಪತಿವಿಠಲನ ತೋರುವತನಕ ॥ 5 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

93. ರಾಘವೇಂದ್ರನೆ । ಪಾಲಿಸೊ ಎನ್ನನು

ರಾಘವೇಂದ್ರನೆ । ಪಾಲಿಸೊ ಎನ್ನನು ॥ ಪ ॥

ರಾಘವೇಂದ್ರ ಭವರೋಗವಕಳೆದು।
ನಿರೋಗಿಯನ್ನು ಮಾಡು ಜಾಗುಮಾಡದಲೆ ॥ ಅ.ಪ ॥

ತುಂಗಾತೀರದಿ। ಹಿಂಗದೆ ಧ್ಯಾನಿಪ। ಯೋಗನಿದ್ರೆಯಲಿ।
ಭಂಗಪಡಿಪ ದುಸ್ಸಂಗವಕಳೆದು, ಶ್ರೀ ।
ರಂಗನ ಭಜಿಪರ ಸಂಗವಕೊಡೊ ॥ 1 ॥

ಮೋದದಿಂದಲಿ। ಸ್ತೋತ್ರವ ಮಾಡೆ । ಮೋದತೀರ್ಥರ ।
ಪಾದಧೂಳಿಯನು ಮಾಡಿ ಎನ್ನನು
ಬಾಧೆಯನು ತಾ ಬಿಡಿಸುವ ಗುರುವೇ ॥ 2 ॥

ಏಸು ಜನುಮದಿ । ಕ್ಲೇಶವು ಭವದಿ। ಮೋಸವಾಗಿದೆ।
ಲೇಸು ನಿನ್ನಯ ಸ್ಮರಣೆಯನು ಕೊಟ್ಟು ।
ಶ್ರೀಕರವಿಠಲನ ಪಾದವ ತೋರೊ ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

94. ನಮೋ ನಮೋ ಎನ್ನ ಸಾಕುವ ಧೊರೆಯೆ

ನಮೋ ನಮೋ ಎನ್ನ ಸಾಕುವ ಧೊರೆಯೆ ॥ ಪ ॥

ಪ್ರೇಮದಿ ಸಲಹೋ ಎನ್ನ ದೊರೆಯೆ ॥ ಅ.ಪ ॥

ಶರಣು ಬಂದವರಿಗೆ ಪೊರೆವ ಬಿರುದು ಪೊತ್ತು।
ಪುರ ಮಂಚಾಲೆಯೊಳು ಮೆರೆಯುವ ಕರುಣಿಯೋ ॥ 1 ॥

ನದಿಯಲಿ ಮಿಂದುನಿಂದು ದರ್ಶನಕೆ ಬಂದೆ ।
ಮೋದದಿಂದಲಿ ಪ್ರೆರೆಯೆ ಮಂದಹಾಸದ ಗುರುವೇ ॥ 2 ॥

ಶ್ರೀಕರವಿಠಲನದಾಸನು ನೀನೆಂದು ।
ಸಕಲ ಲೋಕದೊಳು ಖ್ಯಾತಿಪಡೆದೆಯೋ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

95. ಕಾಯೋ ಗುರುವೇ । ನಿನ್ನ ನಂಬಿರುವೆ

ಕಾಯೋ ಗುರುವೇ । ನಿನ್ನ ನಂಬಿರುವೆ ॥ ಪ ॥

ಕಾಯಜನ ಬಾಧೆಗೆ ಸಿಲುಕಿ ಕಲುಷಿತನಾಗಿ ॥ ಅ.ಪ. ॥

ಅಧಿಕವಾಗಿ ಎನಗೆ ಮಂದಮತಿನಾನಾಗಿ,
ಹಿತವಾಗಿ ಮತಿ ತೋರಿಸಯ್ಯ ಉದ್ಧರಿಸೊ ॥ 1 ॥
ಸಂತರ ಸಹವಾಸ ಇಲ್ಲದೆ ತಾಪದಿ ।
ಕಂತುಪಿತನ ದೂತ ಚಿಂತೆಯು ಕಳೆಯುತ ॥ 2 ॥

ಸಂಸಾರವೆಂಬ ಮಾಯಾಪಾಶವ ಕಳೆದು ।
ಕಂಸಾರಿ ವರದವಿಠಲನ ನಿಜದಾಸ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

96. ಗುರುವೆ ನಿನ್ನಯ ಪಾದ ಪೊಂದಿದವನು

ಗುರುವೆ ನಿನ್ನಯ ಪಾದ ಪೊಂದಿದವನು
ನಾನು ಕುಂದುಗಳೆನಿಸುವುದು ಛಂದವೇ ॥ ಪ ॥

ಒಡೆಯ ನಾಮಾಡಿದ ಅಪರಾಧಂಗಳು
ಎಣಿಸಿದಡೆಕಡಿಗೆ ಬೀಳುವ ಗತಿಯಂತೋ ॥ ಅ.ಫ ॥

ಅಡಿಗಡಿಗೆ ಇನ್ನು ನಾ ನೀಚಯೋನಿಯೋಳು
ಜನಿಸಲಾರೆ ಇನ್ನು ಜನಿಸಲಾರೆ ।
ಕಡುದಯದಿಂದಲಿ ಬಡವನಾದೆನ್ನನು ಭವ
ಕಡಲಿನಿಂದ ಕಡೆಹಾಯಿಸು ಗುರುವೇ ॥ 2 ॥

ಹಿಂದೆ ಮಾಡಿದ ಕರ್ಮ ವೃಂದಗಳು
ನಿನ್ನ ದರುಷನಾದಂದಿಗೆ ಬೆಂದುಪೋದಾವು ।
ಮಂದರಾದ್ರಿಯುದರ ವರದವಿಠಲನ
ತಂದು ತೋರೊ ಮರೆಯದಿರು ಗುರುವೇ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

97. ರಾಘವೇಂದ್ರ ಗುರುರಾಯಾ ನೀ ವೇಗದಿ ಪಿಡಿ ಎನ್ನ ಕೈಯ್ಯಾ

ರಾಘವೇಂದ್ರ ಗುರುರಾಯಾ ನೀ
ವೇಗದಿ ಪಿಡಿ ಎನ್ನ ಕೈಯ್ಯಾ ॥ ಪ ॥

ಆಗಾಮಿಸಂಚಿತಭೊಗಗಳುಳ್ಳ ಭವ-
ಸಾಗರದಲಿ ಬಿದ್ದೆ ವೇಗದಿ ನೀ ಬಂದು ॥ ಅ.ಪ. ॥

ಭಾವದ್ರವ್ಯಕ್ರಿಯಾದ್ವೈತ
ಇದರನುಭಾವವ ತಿಳಿಯದೆ ನಿರುತ।
ಸೇವಿಪ ಸಂತತ ಈವಿಧನರರನು
ದೇವರೆಂದುನುದಿನ ಭಾವಿಸಿದೆನ್ನು ॥ 1 ॥

ಅಶನ ವಸನಕಾಗಿ ನಾ ಪರವಶದಲಿ ಶಿರಬಾಗಿ।
ಅಸಮ ನಿನ್ನಯ ಪಾದಬಿಸಜಭಜಿಸದೆ ನಾ
ವಸುಮತಿಯೊಳು ಬಲು ಹಸನಗೆಟ್ಟನ್ನನು ॥ 2 ॥

ಶಿರಿವರಗುರುಜಗನ್ನಾಥವಿಠಲನ ಪರಿಸರವರನಾಥ
ಸರಿಯೆನಿಸಿದ ನಿನ್ನ ಪರಿಚರರೊಳು ಎನ್ನ
ಮರೆಯದೆ ದಯದಲಿ ಪೊರೆವೊದು ಎನ್ನನು ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

98. ಮಹಿಮೆ ನೋಡಿರೈ ರಾಯರ ಮಹಿಮೆ ಪಾಡಿರೈ

ಮಹಿಮೆ ನೋಡಿರೈ ರಾಯರ ಮಹಿಮೆ ಪಾಡಿರೈ ॥ ಪ ॥

ರಾಘವೇಂದ್ರ ಯತಿಗಳೆಂದು ಬಾಗಿ ನಮಿಸುವವರ ಮನದ।
ರಾಗದ್ವೇಷಾದಿಗಳ ಕಳೆದು ನೀಗಿಸುವರು ಭವದ ಬದ್ಧ ॥ 1 ॥

ಸೀತಾಪತಿಯ ಪೂಜಿಸುತಲಿ ಖ್ಯಾತರಾದ ಯತಿಗಳನ್ನು
ಪ್ರೀತಿಯಿಂದ ಸೇವಿಸುವರ ಪಾತಕಗಳ ಕಳೆದು ಪೊರೆವ ॥ 2 ॥

ಗಳದಿ ಹೊಳೆವ ತುಳಸಿಮಾಲೆ ಹೊಳೆವ ನಗೆಯ ಮುಖದ ಭವ।
ಕಮಲನಾಭವಿಠ್ಠಲನೊಲಿಸಿ ಹಲವು ವಿಧದಿ ಪೂಜಿಸುವರ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

99. ಕಾಯೋ–ಕಾಯೋ ಕಾಯೋ ಕಾಯೋ

ಕಾಯೋ–ಕಾಯೋ ॥ ಪ ॥

ಕಾಯೋ ಕಾಯೋ ಗುರುರಾಯನೇ ತವ ಪದ–
ತೋಯಜಯುಗ ಎನ್ನ ಕಾಯದಲಿಟ್ಟು ॥ ಅ.ಪ ॥

ಕ್ಷುಲ್ಲಕ ಮನುಜರ ಸೊಲ್ಲನೆ ನೀಗಿಸಿ ।
ಹಲ್ಲನೆ ಮುರಿಯುವ ಬಲ್ಲಿದ ನೀನೇ ॥ 1 ॥

ನಿನ್ನಯ ಜನರನ ಮನ್ನಣೆ ಮಾಡದೆ ।
ಬನ್ನವ ಬಡಿಪರ ಖಿನ್ನರ ಮಾಡಿ ॥ 2 ॥

ದೂತರ ನಿಚಯಕೆ ಈ ತೆರ ಚಿಂತೆಯು।
ಯಾತಕೆ ಗುರುಜಗನ್ನಾಥವಿಠಲದೂತ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

100. ರಾಘವೇಂದ್ರ ಗುರು ನೀ ದಯಮಾಡದೆ

ರಾಘವೇಂದ್ರ ಗುರು ನೀ ದಯಮಾಡದೆ ।
ಈ ಧರೆಯೊಳಗೆ ಪೊರೆವರು ಯಾರು ॥ ಅ.ಪ ॥

ಏಸೇಸು ಜನುಮದಿ ದೋಷದಿಂದಲಿ ಬಂದೆ ।
ಕಾಶಿಗಾಗಿ ನಾ ದಿನಗಳ ಕಳೆದೆನು. ॥ 1 ॥

ಸಡಗರದಿಂದಲಿ ಮನಕೆ ಬಂದು ನೀನು ।
ಪಿಡಿದು ಸುಖವನು ಬಿಡದೆ ಸಲಹುವದು ॥ 2 ॥

ರಾಮಚಂದ್ರವಿಠಲನ ದಾಸನು ನೀನೆಂದೂ ।
ಘಮ್ಮನದಿಂದಲಿ ಬಂದು ಪೊರೆಯೊ ನೀ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ

101. ನಂಬಿ ಕೆಟ್ಟವರಿಲ್ಲವೋ ಈ ಗುರುಗಳ

ನಂಬಿ ಕೆಟ್ಟವರಿಲ್ಲವೋ ಈ ಗುರುಗಳ ।
ನಂಬದೇ ಕೆಡುವರುಂಟೋ ॥ ಪ ॥

ನಂಬಿದ ಜನರಿಗೆ ಬೆಂಬಲ ತಾನಾಗಿ ।
ಹಂಬಲಿಸಿದ ಫಲ ತುಂಬಿ ಕೊಡುವ ರನ್ನ ॥ ಅ.ಪ. ॥

ಜಲಧರ ದ್ವಿಜವರಗೆ ತಾನೇ ಒಲಿದು ।
ಸುಲಭ ಮುಕುತಿಯನಿತ್ತನು । ಚೆಲುವ
ಸುತನ ಪಡೆದ ಲಲನೆಗೆ ತ್ವರದಿಂದ ।
ಪುಲಿನಗರ್ತದಿ ದಿವ್ಯಜಲವನಿತ್ತವರನ್ನ ॥ 1 ॥

ಮೃತ್ಯುದೂತರು ತನ್ನನು । ಪೊಂದಿದ
ನಿಜಭೃತ್ಯನ ಕರೆದೊಯ್ಯಲು । ಸತ್ತ-
ದ್ವಿಜನ ತಾನು ಮತ್ತೆ ಧರೆಗೆ ತಂದು ।
ಮೃತ್ಯು ಬಿಡಿಸಿ ಸುಖವಿತ್ತು ಪೊರೆದಿಹರನ್ನ ॥ 2 ॥

ದಿಟಗುರುಜಗನ್ನಾಥ ವಿಠ್ಠಲನೊಲುಮೆ
ಘಟನವಾದುದರಿಂದ । ಘಟನಾಘಟನ

ಕಾರ್ಯ ಘಟನ ಮಾಡುವ ನಮ್ಮ ।
ಪಟುಗುರುವರ ಹೃತ್ಪಟದಿ ಇರುವರನ್ನ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

102. ವಿನಯದಿಂದಲಿ ನಮಿಸುವೆನಾ ।

ವಿನಯದಿಂದಲಿ ನಮಿಸುವೆನಾ । ವೃಂದಾ–
ವನದಿ ರಾಜಿಪ ರಾಘವೇಂದ್ರ ಗುರುವರನ ॥ ಪ ॥

ದುರಿತವಾರಣ ಪಂಚಾನನ–ನರ–
ಹರಿರೂಪ ಸ್ತಂಭದಿಪ್ರಕಟಗೈಸಿದನ।
ಹರಿಭಕ್ತಾಗ್ರಣಿಯೆಂದೆನಿಪನ ।– ನಾರ–
ದರ ಉಪದೇಶ ಗರ್ಭದಿಕೈಕೊಂಡಿಹನ ॥ 1 ॥

ವರ ಮಂತ್ರಸದ್ಮನಿಲಯನ ಶ್ರೀ
ಗುರು ಮಧ್ವಮತ ದುರಂಧರನೆನಿಸುವನ।
ಹರಿ ಪ್ರೀತಿ ಪೂರ್ಣ ಪಾತ್ರರನ ಈ–
ಧರೆಯೊಳು ಬಹುಪರಿ ಮೆರೆವ ಮುನಿಪನ ॥ 2 ॥

ತುಂಗಭದ್ರತೀರವಾಸನ ಶುಭ
ಮಂಗಳಚರಿತ ಕಮಂಡಲಧರನ ।
ರಂಗವರದೇಶವಿಠಲನ ಪದ
ಭೃಂಗ ಯತಿಕುಲ ಕಂಜಾರ್ಕ ಸನ್ನಿಭನ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ

103. ಧರೆಯೋದ್ಧಾರಕೆ ಮೆರೆವರು ಗುರುಗಳು ವರಮಂತ್ರಾಲಯದಲ್ಲಿ

ಧರೆಯೋದ್ಧಾರಕೆ ಮೆರೆವರು ಗುರುಗಳು ವರಮಂತ್ರಾಲಯದಲ್ಲಿ ।
ವರಪ್ರಲ್ಹಾದರು ವ್ಯಾಸ ಪ್ರಭುಗಳು ವರ ತುಂಗಾತಟದಲ್ಲಿ ॥ 1 ॥

ಕೊರೆದಿಹ ಕಂಬದಿ ಹರಿಯನು ತೋರಿಸಿ ಹರಿನಾಮವ ಜಗದಲ್ಲಿ ।
ಮೆರೆಸಿದ ಪ್ರಲ್ಹಾದರು ಮೆರೆವರು ತಾ ವರ ತುಂಗಾತಟದಲ್ಲಿ ॥ 2 ॥

ಹರಿಮತ ಸಾರವ ಹರಿಪದ ಹಾರವ ಪರಿಪರಿ ವಿಧ ಪದದಲ್ಲಿ ।
ಇಳೆಯೊಳು ಸಾರಿದ ವ್ಯಾಸರು ಮೆರೆವರು ವರಮಂತ್ರಾಲಯದಲ್ಲಿ ॥ 3 ॥

ಧರೆಯನು ಮುಸುಕಿದ ತಮವನು ತೆರೆಯಲು ಹರುಷದಿ ಕಲಿಯುಗದಲ್ಲಿ ।
ಗುರು ರಾಘವೇಂದ್ರರ ಕರೆ ಮೆರೆದಿಹರು ವರಮಂತ್ರಾಲಯದಲ್ಲಿ ॥ 4 ॥

ತನು ಮನ ಧನಗಳ ಕೊನೆಗಾಣದೆ ಭವನಚರಿಸುವ ಜನದಲ್ಲಿ ।
ಮಣಿದೀಪಕಮತಿ ಮನನಿಸಿ ಮೆರೆವರು ವರಮಂತ್ರಾಲಯದಲ್ಲಿ ॥ 5 ॥

ವಿಷಯದ ವಿಷದಿಂದುಸಿರಿಡುತ ಬಲು ದೆಶೆಗೆಡುತಿಹ ಮನದಲ್ಲಿ ।
ಹೊಸಜ್ಯೋತಿಯ ಕರ ಮರೆಯಲು ಮೆರೆವರು ವರ ಮಂತ್ರಾಲಯದಲ್ಲಿ ॥ 6॥

ದಿನ ಸಂಸಾರದ ನೆನೆದರೆ ಘೋರದ ಘನ ರಥವೆಡೆತಡದಲ್ಲಿ ।
ಮುನಿ ಮಹರಥಿಯಾಕ್ಷಣ ಬಂದೊಲಿವರು ವರಮಂತ್ರಾಲಯದಲ್ಲಿ॥7 ॥

ಭುವಿಯೊಳು ಬಹುಪರಿ ಬಳಲುವ ಮನುಜರ ಬವಣೆಯ ಬಲು ತಿಳಿದಿಲ್ಲಿ ।
ತವಕದಿ ಬಿಡಿಸಲು ಅವತರಿಸಿರುವರು ವರಮಂತ್ರಾಲಯದಲ್ಲಿ ॥ 8 ॥

ರಾಜರ ರಾಜರ ಗುರುಮಹಾರಾಜರ ದೇಹವ ಬಣ್ಣಿಪುದೆಂತು ।
ರಾಜಿಪ ಶ್ರೀ ಹರಿಪಾದಸರೋಜವ ಪೂಜಿಪ ಸಂಪದರಿಂತು ॥ 9 ॥

ಗುರುಪದಸೇವಿಸೆ ಹರುಷದಿ ಭಾವಿಸೆ ಗುರುಪದಹಾರವನಿಂದು ।
ಇರಿಸಿದೆ ಪದದೊಳು ಹರಿವಿಠಲೇಶನೆ ನಿರುತದಿ ಪಾಲಿಪುದೆಂದು ॥ 10॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ.

104. ಶ್ರೀರಾಘವೇಂದ್ರಾರ್ಯ ಶ್ರೀರಾಘವೇಂದ್ರಾರ್ಯ

ಶ್ರೀರಾಘವೇಂದ್ರಾರ್ಯ ಶ್ರೀರಾಘವೇಂದ್ರಾರ್ಯ
ಶ್ರೀರಾಘವೇಂದ್ರಾರ್ಯ ಪಾಹಿಪ್ರಭೋ ।
ಅಜ್ಞಾನ ನಾಶಾಯ ವಿಜ್ಞಾನ ಪೂರ್ಣಾಯ
ಸುಜ್ಞಾನ ದಾತ್ರೇ ನಮಸ್ತೇ ಗುರೋ ॥ 1 ॥

ಶ್ರೀರಾಘವೇಂದ್ರಾರ್ಯ ಶ್ರೀರಾಘವೇಂದ್ರಾರ್ಯ
ಶ್ರೀರಾಘವೇಂದ್ರಾರ್ಯ ಪಾಹಿಪ್ರಭೋ ॥
ಆನಂದರೂಪಾಯ ನಂದಾತ್ಮಜ
ಶ್ರೀಪದಾಂಭೋಜಭಾಜೇ ನಮಸ್ತೇ ಗುರೋ ॥ 2 ॥

ಶ್ರೀರಾಘವೇಂದ್ರಾರ್ಯ,,,,,,,
ಇಷ್ಟಪ್ರದಾನೇನ ಕಷ್ಟಪ್ರಹಾಣೇನ ಶಿಷ್ಟಸ್ತುತ ಶ್ರೀಪದಾಂಭೋಜ ಭೋ॥3॥
ಶ್ರೀರಾಘವೇಂದ್ರಾರ್ಯ,,,,,,,,
ಈಡೇಭವತ್ಪಾದ ಪಾಥೋಜಮಾದ್ಯಾಯ
ಭೂಯೋऽಪಿಭೂಯೋ ಭಯಾತ್ಪಾಹಿಭೋ ॥ 4 ॥

ಶ್ರೀರಾಘವೇಂದ್ರಾರ್ಯ,,,,,,,,,,,,,,,
ಉಗ್ರಂಪಿಶಾಚಾದಿ ಕಂದ್ರಾವಯಿತ್ವಾಶು
ಸೌಖ್ಯಂಜನಾನಾಂ ಕರೋಷೀಶ ಭೋ ॥ 5 ॥

ಶ್ರೀರಾಘವೇಂದ್ರಾರ್ಯ,,,,,,
ಕೃಷ್ಣಾವಧೂತೇನ ಗೀತೇನ ಮಾತ್ರಾಕ್ಷರಾದ್ಯೇನ
ಗಾಥಾಸ್ತವೇನೇಡ್ಯ ಭೋ ।
ಶ್ರೀರಾಘವೇಂದ್ರಾರ್ಯ ಶ್ರೀರಾಘವೇಂದ್ರಾರ್ಯ
ಶ್ರೀರಾಘವೇಂದ್ರಾರ್ಯ ಪಾಹಿಪ್ರಭೋ ।
ಶ್ರೀರಾಘವೇಂದ್ರಾರ್ಯಶ್ರೀರಾಘವೇಂದ್ರಾರ್ಯ
ಶ್ರೀರಾಘವೇಂದ್ರಾರ್ಯ ಮಾಂ ರಕ್ಷಭೋ ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ.

105. ಬಿಡೆನೊ ನಿನ್ನಡಿ ರಾಘವೇಂದ್ರ

ಬಿಡೆನೊ ನಿನ್ನಡಿ ರಾಘವೇಂದ್ರ । ಕೊಡು ಸೇವೆ ಶ್ರೀ ಗುಣಸಾಂದ್ರ ।
ಒಡೆಯ ನೀ ಎನಗೆ ರಾಘವೇಂದ್ರ । ತಡಿಯದೆ ಕೈ ಪಿಡಿ ರಾಘವೇಂದ್ರ ।
ಮಂದಜಾಸನ ದೂತ ರಾಘವೇಂದ್ರ ।
ಮಂದನ್ನ ಪೊರೆಯೊ ರಾಘವೇಂದ್ರ ॥ 1 ॥

ಎಂದೂ ನೋಡದ ರೂಪ ರಾಘವೇಂದ್ರ ।
ಬಂದ ಶ್ರೀ ನರಸಿಂಹ ರಾಘವೇಂದ್ರ ।
ತಂದೆಗೆ ಬೇಡಿದೆ ರಾಘವೇಂದ್ರ ।
ಎಂದೆಂದು ಭಕುತಿಯ ರಾಘವೇಂದ್ರ ॥ 2 ॥

ಸಕಲಪ್ರದಾತಾ ರಾಘವೇಂದ್ರ । ಮುಕುತಿಪ್ರದಾತಾ ರಾಘವೇಂದ್ರ ।
ಸುಖದಿ ಮಂತ್ರಾಲಯದಿ ರಾಘವೇಂದ್ರ ।
ಲಕುಮೀಶನಧ್ಯಾನಗೈವ ರಾಘವೇಂದ್ರ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ-ಗೋವಿಂದ.

106. ರಾಘವೇಂದ್ರ ಗುರುರಾಯರ ಸೇವಿಸಿರೋ

ರಾಘವೇಂದ್ರ ಗುರುರಾಯರ ಸೇವಿಸಿರೋ।
ಸೌಖ್ಯದಿ ಜೀವಿಸಿರೋ ॥ ಪ ॥

ತುಂಗಾತೀರದಿ ರಘುರಾಮನ ಪೂಜಿಪರೋ ।
ನರಸಿಂಗನ ಭಜಕರೋ ॥ ಅ.ಪ. ॥

ಶ್ರೀ ಸುಧೀಂದ್ರ ಕರ ಸರೋಜ ಸಂಜಾತ । ಜಗದೊಳಗೆ ಪುನೀತ ।
ದಾಶರಥಿಯ ದಾಸತ್ವವ ತಾನ್ವಹಿಸಿ । ದುರ್ಮತಗಳ ಜಯಿಸಿ ।
ಈ ಸಮೀರ ಮತ ಸಂಸ್ಥಾಪಕರಾಗಿ । ನಿಂದಕರನು ನೀಗಿ ।
ಭೂಸುರರಿಗೆ ಸಂಸೇವ್ಯ ಸದಾಚರಣೀ । ಕಂಗೊಳಿಸುವ ಕರುಣಿ ॥ 1 ॥

ಕುಂದದೆ ವರ ಮಂತ್ರಾಲಯದಲ್ಲಿರುವ । ಕರೆದಲ್ಲಿಗೆ ಬರುವ ।
ವೃಂದಾವನಗತ ಮೃತ್ತಿಕೆ ಜಲಪಾನ । ಮುಕ್ತಿಗೆ ಸೋಪಾನ ॥
ಸಂದರ್ಶನ ಮಾತ್ರದಲಿ ಮಹತ್ಪಾಪ । ಬಡಿದೋಡಿಸಲಾಪ ।
ಮಂದಭಾಗ್ಯರಿಗೆ ದೊರಕದಿವರ ಸೇವಾ । ಶರಣರ ಸಂಜೀವಾ ॥ 2 ॥

ಶ್ರೀದವಿಠ್ಠಲನ ಸನ್ನಿಧಾನ ಪಾತ್ರ । ಸಂಸ್ತುತಿಸುವ ಮಾತ್ರ ।
ಮೋದಪಡಿಸುತಿಹ ತಾ ನಿಹಪರದಲ್ಲಿ । ಈತಗೆ ಸರಿಯೆಲ್ಲಿ ॥
ಮೇದಿನಿಯೊಳಗಿನ್ನರಸಲು ನಾ ಕಾಣೆ । ಪುಸಿಯಲ್ಲೆನ್ನಾಣೆ ।
ಪಾದಸ್ಮರಣೆಯ ಮಾಡದವನೆ ಪಾಪಿ । ನಾ ಪೇಳುವೆ ಸ್ಥಾಪಿ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ.

107. ತುಂಗಾತೀರದಿ ನಿಂತ ಸುಯತಿವರನ್ಯಾರೇ ಪೇಳಮ್ಮಯ್ಯ ।

ತುಂಗಾತೀರದಿ ನಿಂತ ಸುಯತಿವರನ್ಯಾರೇ ಪೇಳಮ್ಮಯ್ಯ । ॥ ಪ ॥
ಸಂಗೀತಪ್ರಿಯ ಮಂಗಳ ಸುಗುಣಿತ ರಂಗ
ಮುನಿಕುಲೋತ್ತುಂಗಾ ಕಣಮ್ಮಾ ॥ ಅ. ಪ ॥

ಚೆಲ್ವ ಸುಮುಖ ಫಣಿಯಲ್ಲಿ ತಿಲಕನಾಮಗಳು ಪೇಳಮ್ಮಯ್ಯ ।
ಜಲಜ ಮಣಿಯು ಕೊರಳೊಳು ತುಳಸಿ ಮಾಲೆಗಳು ಪೇಳಮ್ಮಯ್ಯ ॥
ಸುಲಲಿತ ಕುಂಡಲ ದಂಡವನ್ನೇ ಧರಿಸಿಹನೆ ಪೇಳಮ್ಮಯ್ಯ ।
ಖುಲ್ಲ ಹಿರಣ್ಯಕನಲ್ಲಿ ಜನಿಸಿದ ಪ್ರಲ್ಹಾದನು ತಾನಿಲ್ಲಿಹನಮ್ಮ ॥ 1 ॥

ಸುಂದರ ಚರಣಾರವಿಂದ ಸುಭಕುತಿಯಲಿಂದಾ ಪೇಳಮ್ಮಯ್ಯ ।
ವಂದಿಸಿ ಸ್ತುತಿಸುವ ಭೂಸುರರು ಬಲುವೃಂದಾ ಪೇಳಮ್ಮಯ್ಯ ।
ಚಂದದಲಂಕೃತದಿ ಶೋಭಿಸುವ ಆನಂದಾ ಪೇಳಮ್ಮಯ್ಯ । ಹಿಂದೆ
ವ್ಯಾಸಮುನಿಯೆಂದೆನಿಸಿದ ಕರ್ಮಂದಿಗಳರಸಘದಿಂದ ರಹಿತನೆ ॥ 2 ॥

ಅಭಿನವ ಜನಾರ್ದನವಿಠಲನ ಧ್ಯಾನಿಸುವ ಪೇಳಮ್ಮಯ್ಯ ।
ಅಭಿವಂದಿತರಿಗೆ ಅಖಿಲಾರ್ಥವ ಸಲ್ಲಿಸುವ ಪೇಳಮ್ಮಯ್ಯ ॥
ನಭಮಣಿಯಂದದಿ ಭೂಮಿಯಲ್ಲಿ ರಾಜಿಸುವ ಪೇಳಮ್ಮಯ್ಯ ।
ಶುಭಗುಣ ನಿಧಿ ಶ್ರೀರಾಘವೇಂದ್ರ ಯತಿ ।
ಅಂಬುಜಭವಾಂಡದೊಳು ಪ್ರಬಲ ಕಣಮ್ಮ

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ.

108. ಕರುಣಿ ಕಾಯೋ ರಾಘವೇಂದ್ರಗುರುವೇ

ಕರುಣಿ ಕಾಯೋ ರಾಘವೇಂದ್ರಗುರುವೇ ।
ನೆರೆನಂಬಿದವರ ಕಾಮಿತ ಕಲ್ಪತರುವೆ ॥ ಪ ॥
ತೀರ್ಥಪಾದನ ಪಾದಪಂಕಜ ಭೃಂಗಾ ।
ಧೂರ್ತವಾದಿಗಳಂಥ ತಿಮಿರ ಪತಂಗ ।
ಕಾರ್ತ ಸ್ವರಾಲೋಷ್ಟ ಸಮ ಚಿತ್ತ ಸಂಗ ।
ಆರ್ತ ಜನರ ಪಾಲಾ ಅತಿ ದಯಾಪಾಂಗ ॥ 1 ॥

ಫಲ ಬೇಡಿ ಸೇವೆ ಮಾಡುವ ದಾಸ ನಾನಲ್ಲ ।
ಫಲಕೆ ಸೇವೆ ಇಚ್ಛಿಸುವ ಸ್ವಾಮಿ ನೀನಲ್ಲ ।
ಹಲವು ಮಾತೇನು ಈ ವಿವರವನ್ನೆಲ್ಲಾ ।
ತಿಳಿದ ಸರ್ವಜ್ಞರಿಗೆ ಬಿನ್ನೈಸು ಸೊಲ್ಲಾ ॥ 2 ॥

ಮರುದಂಶ ಮಧ್ವ ಮತಾಬ್ಧಿ ಚಂದಿರನೇ ।
ಪರಮ ಕಲ್ಯಾಣ ಗುಣರತ್ನಾಕರನೇ ।
ದುರಿತ ಜೀಮೂತಕೆ ಚಂಡ ಮಾರುತನೆ ।
ಗುರು ಗೋಪಾಲವಿಠ್ಠಲನ ದಾಸನೇ ॥ 3 ॥

ರಾಘವೇಂದ್ರಗುರುಸಾರ್ವಭೌಮ ಗೋವಿಂದ–ಗೋವಿಂದ.